Reg. No. M 1550

If not delivered please return to

"KODAGU" OFFICE, MERCARA.

15—6—1935.

ಕೊಡಗು.

ಸರ್ವೇಷಾಂ ಭೂತದಯಯೈವ ವಿದ್ಯಾ ವೀತಿ ಪ್ರಯತ್ನಕಾಃ॥ ಐಕ್ಯಮುಖ್ಯೇನ ದೇಶಾನಾಂ ಸುಸ್ಥಿರಾಣಾಮ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಏ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಸಂಪುಟ ೧೫ | ಮಡಿಕೇರಿ, ಸನ್ ೧೯೩೫ನೇ ಇಸವಿ ಜೂನ್ ತಾರೀಕು ೧೫ನೇ ಶುಕ್ರವಾರ. | ಸಂಚಿಕೆ ೨

Telegrams:
'PRECIOUS.'

By Appointment
To H. E. The Governor of Madras.

Telephone:
3145

M. R. Ry., DEWAN BAHADUR
K. Chengappa Avl., B. A.
(Retd) Commissioner of Coorg, Writes:

I have had dealings with V. Subramania Iyer, Jeweller for the last 5 or 6 years. The firm is **absolutely reliable, reasonable in prices** and **very obliging.** The **workmanship is good.**

Ear rings. Rs. 50 & upwards.



Necklace Rs 100 & upwards.

M. R. Ry, RAO BAHADUR
A. B. Chengappa Avl.,
'Green Hills', Virajpet Writes;—

I had all my work done by Mr V. Subramania Iyer Jeweller for over ten years,... .... He gives THE BEST OF SATISFACTION His CHARGES are MODERATE, and the FINISH is VERY GOOD.

Fashionable ornaments for the marriage season.

Brooch Rs. 20 & upwards.

V. SUBRAMANIA IYER.

Jeweller, & Diamond Merchant,

52—30 2 & 3 Kuppumuthu Street Tiruvateswarapet MADRAS. POST BOX 423 TRIPLICANE.

Catalogue & special designs with quotations (free) on enquiry.

1906 ನೇ ಇಸವಿಯಲ್ಲಿ ಸ್ಥಾಪಿತವಾದ

"ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಉಡುಪಿ," ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ.

ಶಾಖೆಗಳು:—(1) ಉಡುಪಿ (2) ಕುಂದಾಪುರ (3) ಮಂಗಳೂರು—ರಥ ಬೀದಿ (4) ಮಂಗಳೂರು—ಬಂದರ್. (5) ಮದ್ರಾಸು (6) ಶಿವಮೊಗ್ಗಾ (ಮೈಸೂರು) (7) ಮಡಿಕೇರಿ—(ಕೊಡಗು.)

ಕೊಡಗಿನ ಸೇವೆಯನ್ನು ಮಾಡಲಿಚ್ಛಿಸಿ ತನ್ನ 30ನೇ ವಯಸ್ಸಿನಲ್ಲಿ ಮಡಿಕೇರಿ ಶಾಖೆಯನ್ನು ಆರು ತಿಂಗಳ ಹಿಂದೆ ತೆರೆದಿರುವುದನ್ನು ತಿಳಿದಿರುವಿರಾ?

ನಿಮ್ಮ ವಿಶ್ವಾಸವನ್ನು ಹೊಂದಿ ಶಾಖೆಯ ಮೂಲಧನ	.... ರೂ.	3,50,000
ತಾ. 6—3—1935ರಲ್ಲಿ ಹೊಂದಿ ಶಾಖೆ ಎತ್ತಿದ ಮೂಲಧನ	,,	2,58,305
ಕ್ಷೇಮನಿಧಿ ಮತ್ತು ಇತರ ಆಪದ್ಧನದ ನಿಧಿಗಳು	.... ,,	3,12,144

ನಿರಖು, ಜಾಲ್ತಿ, ಸೇವಿಂಗ್ಸ್, ಕ್ಯೂಮಿಲೇಟಿವ್, ಆಲ್ಪ ಕಾಯಿದೆ ಮುಂತಾದ ಠೇವಣಾತಿಗಳು ಸಹ ಸ್ವೀಕರಿಸಲ್ಪಡುತ್ತವೆ.

ವಿನಿಮಯ ಸೌಕರ್ಯವೇ ಪ್ರಮುಖ ಲಕ್ಷಣ!!!

ನಮ್ಮ ಶಾಖೆಗಳು ಇರುವ ಸ್ಥಳಗಳಲ್ಲಿ ಮೂತ್ಯನಲ್ಲದೆ ಕಾಚಿ, ಕಲ್ಕತ್ತ, ಮುಂಬಾಯಿ, ಮೈಸೂರು, ಬೆಂಗಳೂರು ಇತರ ಪ್ರಾಮುಖ್ಯ ಸ್ಥಳಗಳಿಗೆ ನಮ್ಮ ಡ್ರಾಫ್ಟುಗಳ ಮೂಲಕ ಹಣ ರವಾನಿಸುವ ಏರ್ಪಾಡನ್ನೂ, ಅಂಥಹ ಸ್ಥಳಗಳ ಮೇಲೆ ಕೊಡಲ್ಪಡುವ ಚಕ್ಕುಗಳನ್ನು ಕೊಂಡುಕೊಳ್ಳುವ ಏರ್ಪಾಡನ್ನೂ ಅತೀ ಸುಲಭ ದರದ ಕಮಿಶನ್‌ನಲ್ಲಿ ಮಾಡುವೆವು.

ಚಿನ್ನಾಭರಣಗಳ ಮೇಲೂ, ಪೋಸ್ಟಲ್ ಮತ್ತು ಇತರ ವಿಮಾ ಪಾಲಿಸಿಗಳ ಮೇಲೂ ಬ್ಯಾಂಕಿನ ಆಫೀಸಿನಲ್ಲಿ ವಾಸ್ತವ್ಯವು ಇಡಬಹುದಾದ ಧವಸ ಧಾನ್ಯಗಳ ಮೇಲೂ, ಮತ್ತು ಬ್ಯಾಂಕಿಗೆ ಮುಕ್ತಾರು ಇತರ ಜವಾಬ್ದಾರಿಯ ಮೇಲೂ ಅತೀ ಕಡಮೆ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಮಡಿಕೇರಿ ಆಫೀಸಿಗೆ ಬರಕೊಳ್ಳಬಹುದು.

ಉಡುಪಿ,
15—5—35. 52—31

M. Shrinivasa Prabhu,
(Manager.)

ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಜ್ಯೋರ್.

31—12—33ನೇ ಇಸವಿಗೆ ಮುಗಿದ ಮೂರು ವರ್ಷಗಳ ಕಾರ್ಯಕ್ರಮದ ಪರಿಶೀಲನೆಯು ಉತ್ತಮ ಫಲಾಂಶಗಳನ್ನು ಪ್ರಕಟಗೊಳಿಸಿದೆ.

ಬಿಜ್ರ್ ಕಳೆದು 6,75,000 ರೂ. ಗಿಂತಲೂ ಹೆಚ್ಚು ಉಳಿದಿದೆ.

ಬೋನಸ್ಸು ಹಂಚಿಕೆಯು ಹಿಂದೂಸ್ಥಾನದಲ್ಲಿ ಅನೇಕ ವರ್ಷಗಳಿಂದಲೂ ಇರುವ ಹಿರಿದಾದ ಜೀವವಿಮಾ ಕಂಪೆನಿಗೆ ಸಂತೋಷನವಾಗಿದೆ.

ಜೀವಾವಧಿ ಪಾಲಿಸಿಗಳ ಮೇಲೆ ಸಾಲಿಯ ನ ರೂ. 25%
ಎಂಡೋಮೆಂಟ್ ಪಾಲಿಸಿಗಳ ಮೇಲೆ ಸಾ ಯೂನ ರೂ. 20%

ಜಾರಿಯಲ್ಲಿರುವ ವಿಮೆ ಪೊಲಿಸಿಗಳು (ಹೆಚ್ಚು) ರೂ. 25,00000
ಸಾಲಿಯೂನ ಮೊತ್ತವು (ಹೆಚ್ಚು) ರೂ. 16,00000
ಠೇವಾಣೆವಿಡೆ ಇಕಾಕಿರುವ ಪೊಲಿಸಿಗಳು (ಮುನ್ನೂರು) 70,00000
ಪಕ್ಕಿನ ತೀರ್ಮಾನ (ಹೆಚ್ಚು) ರೂ 31,00000

ನಂಬಿಕೆ ಅಹರ್ವಾದ ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಈ ಜೀವ ವಿಮೆ ಕಂಪೆನಿಯಲ್ಲಿ ಈ ದಿನವೇ ವಿಮೆ ಮಾಡಿರಿ.

ಏಜೆನ್ಸಿಯ ನಿಯಮಗಳು ವಿಶೇಷ ಲಾಭದಾಯಕ.

ಇತರ ವಿವರಗಳಿಗೆ ಕೊಡಲೇ ಈ ಕೆಳಗಿನವರಿಗೆ ಬರೆಯಿರಿ:—

ಬಿ. ಡಿ. ಭಟ್ಟಗ್ನ್ಯಾಮ್ಫ್, ಎಸ್. ಎಂ. (ಲಂಡನ್),
ಜನರಲ್ ಮೇನೇಜರ್, ಅಜ್ಮೀರ್. ಅಥವಾ:—

ಎ. ಎಸ್. ಎಸ್. ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್,
ಚಾಮರಾಜಪೇಟೆ, 3ನೇ ರೋಡು
52—2 ಬೆಂಗಳೂರು ಸಿಟಿ

ವಿವಿಧ ವಾರ್ತಾವಳಿ.

ಮುಂಬಯಿಯಲ್ಲಿ ಕ್ವೆಟ್ಟಾನಿಧಿ.

ಈ ತಾ. 4ರಲ್ಲು ಮೇಯರ್ ನರಿಮನ್‌ರು ಕಾರ್ಪೋರೇಶನ್ನಿನಲ್ಲಿ ಕ್ವೆಟ್ಟಾ ಸಹಾಯಾರ್ಥವಾಗಿ ಸರ್ವ ಪಕ್ಷೀಯ ಸಭೆ ಕರೆದಿದ್ದರು. ಸಭೆಯಲ್ಲಿ ನಿಧಿ ಕೂಡಿಸಲು ಒಂದು ಕಮಿಟಿ ಏರ್ಪಡಿಸಲ್ಪಟ್ಟು ಆಗಿಂದಾಗ್ಯೆ 7327 ರೂ. ಕೂಡಿದವು

ಭೂಕಂಪವಾಗುವದೆಂದು ಮೊದಲೇ ಹೇಳಿದ್ದನಂತೆ.

ಕ್ವೆಟ್ಟಾದಲ್ಲಿ ಈ ಪೂರ್ವದಲ್ಲಿ ಅಂದರೆ 1931ರಲ್ಲಿಯೂ ಭೂಕಂಪವಾಗಿತ್ತು. ಆಗ ಓರ್ವ ಬಂಗಾಲಿ ಹವಾಮಾನ ತಜ್ಞನು 5 ವರ್ಷದ ಮೇಲೆ ಪುನಃ ಭೂಕಂಪವಾಗುವದೆಂದು ಭವಿಷ್ಯ ಹೇಳಿದ್ದನಂತೆ. ಆದರೆ ಭವಿಷ್ಯ ಪ್ರಸಿದ್ಧ ಮಾಡಿದರೆ ಖಟ್ಟಿ ಹಾಕಲ್ಪಡುವದಾಗಿ ಬೆದರಿಕೆ ಹಾಕಲ್ಪಟ್ಟಿತ್ತಂತೆ.

ವಯಸ್ಸು 125—ಲಗ್ನ 3—ಮಕ್ಕಳು 30

ಇನ್ನೂ ಪ್ರಾಯಸ್ಥ

ಕಾಬೂಲಿನಲ್ಲಿ ಅಬ್ದುಲ್ ರಸೂಲ್ ಖಾನ್ ಎಂಬವನು ತನ್ನ 125ನೇ ಜನ್ಮೋತ್ಸವವನ್ನು ಆಚರಿಸಿದನು. ಇವನು ಮೂವರು ಹೆಂಗಸರನ್ನು ಮದುವೆಯಾದನು. ಅವರಿಂದ 30 ಮಕ್ಕಳಿದ್ದಾರೆ. ಈತನು ಆರೋಗ್ಯದಿಂದಿದ್ದಾನೆ. ಯುವಕನಷ್ಟೇ ವೇಗವಾಗಿ ನಡೆಯಬಲ್ಲ. ದೃಷ್ಟಿ ಚೆನ್ನಾಗಿದೆ.

ಕಳ್ಳರನ್ನು ಗುರುತಿಸುವ ಪೆಟ್ಟಿಗೆ.

ಕಳೆದ ತಿಂಗಳಲ್ಲಿ ನಡೆದ ಇಂಡೂರಿನ ವಸ್ತು ಪ್ರದರ್ಶನದಲ್ಲಿ ಒಬ್ಬ ದೇಶೀಯ ಕಬ್ಬಿಣದ ಕೆಲಸಗಾರನು ಭಂಡು ಆಶ್ಚರ್ಯಕರವಾದ ಕಬ್ಬಿಣದ ಪೆಟ್ಟಿಗೆಯನ್ನು ತಯಾರಿಸಿ ತಂದಿದ್ದನು. ಅದರಲ್ಲಿ ಕಳ್ಳರನ್ನು ಗುರುತಿಸುವುದಕ್ಕೆ ಅನುಕೂಲವಾದ ಸಾಧನಗಳನ್ನು ನಿರ್ಮಿಸಿದ್ದನಂತೆ. ಹೀಗಿದ್ದರೆ ಅನೇಕ ಪೊಲೀಸರ ಹೊಟ್ಟೆಯ ಮೇಲೆ ಕಾಲು ಬಂದಂತೆಯೇ.

55 ವರ್ಷಗಳ ವರೆಗೆ ಖೈರನ್ನೇ ಕುಡಿದ್ದಿಲ್ಲ.

ಯೂಸಫ್ ಕೋಜರ್ ಎಂಬ ಓರ್ವ ವಿಚಿತ್ರ ಪುರುಷನು ಮೊನ್ನೆ ತಾನೇ ತನ್ನ 136ನೇ ವರ್ಷ ವಯಸ್ಸಿನಲ್ಲಿ ಸತ್ತನು. ಇವನಿಗೆ ನಾಲ್ಕು ಜನ ಮಕ್ಕಳಿದ್ದು ಆ ಪೈಕಿ ಕೊನೆಯವನು ಇವನ 102ನೇ ವರ್ಷ ವಯಸ್ಸಿನಲ್ಲಿ ಹುಟ್ಟಿದನಂತೆ ಈ ಮನುಷ್ಯನ ಆಹಾರವಾದರೋ ಕೇವಲ ಹಂಡು ಮತ್ತು ಹಾಲು. ಕಳೆದ 55 ವರ್ಷಗಳಿಂದ ಅವನು ಒಂದು ಹನಿಯಾದರೂ ನೀರು ಕುಡಿದ್ದಿಲ್ಲವಂತೆ!

ಸೂರ್ಯಕಾಂತಿಯ ಮನೆ

ಇಟಲಿ ದೇಶದಲ್ಲಿ ಓರ್ವ ಸೂರ್ಯ ಕಾಂತಿಯ ಗೃಹಸ್ಥನು ಒಂದು ವಿಚಿತ್ರತರವಾದ ಮೂರಂತಸ್ತಿನ ಮನೆಯನ್ನು ಕಟ್ಟಿಸಿರುವನು. ಮುಂಜಾನೆಯಿಂದ ಸಂಜೆಯ ವರೆಗೂ ಅವನಿಗೆ ಯಾವಾಗಲೂ ದಿಸಿಲು ಬೀಳುತ್ತಿರಬೇಕಂತೆ. ಸೂರ್ಯನು ಹೇಗೆ ಹೇಗೆ ತಿರುಗುವನೋ ಅದೇ ರೀತಿ ಅವನ ಮನೆಯೂ ಸಹ ತಿರುಗುವದಂತೆ!

ವಿಚಿತ್ರ ವೃಕ್ಷ.

ಶೇರ್ಪುರದಲ್ಲಿ ಕದಂಬ ವೃಕ್ಷವೊಂದು ವಿಚಿತ್ರ ದೃಶ್ಯವನ್ನು ತೋರಿಸುತ್ತಿದೆ ಸಾಯಂಕಾಲದ ಹೊತ್ತಿನಲ್ಲಿ ಈ ವೃಕ್ಷದ ಕಾಂಡದಿಂದಲೂ, ಎಲೆಗಳಿಂದಲೂ ನೀರು ತನ್ನಷ್ಟಕ್ಕೆ ತಾನೇ ಸುರಿಯುತ್ತಿದೆ. ಆ ನೀರನ್ನು ಪರೀಕ್ಷೆ ಮಾಡಿ ನೋಡಲಾಗಿ ಕೆಲವು ರೋಗಗಳನ್ನು ಗುಣ ಮಾಡುವ ಶಕ್ತಿಯೂ ಆ ನೀರಿನಲ್ಲಿರುವುದೆಂದು ಕಂಡುಬಂದಿದೆ. ಗಂಡಸರು, ಹೆಂಗಸರು ಮಕ್ಕಳು ಎಲ್ಲರೂ ಆ ವೃಕ್ಷವನ್ನು ಸಂದರ್ಶಿಸಿ ಅದರ ನೀರು ಶೇಖರಿಸುತಿದ್ದಾರಂತೆ.

ಕಾಂಗ್ರೆಸಿನ ಸ್ವರ್ಣೋತ್ಸವ

ಬರುವ ಅಕ್ಟೋಬರ್ ತಿಂಗಳಿಗೆ ಹಿಂದೀ ರಾಷ್ಟ್ರೀಯ ಸಭೆಯು ಸ್ಥಾಪಿತವಾಗಿ 50 ವರ್ಷವಾಗುವುದರಿಂದ ಅದರ ಅರ್ಧ ಶತಮಾನೋತ್ಸವವನ್ನು ಈ ವರ್ಷ ವಿಜೃಂಭಣೆಯಿಂದ ಜರುಗಿಸುವ ಕುರಿತು ಕಾಂಗ್ರೆಸು ಪೈಸಿಡೆಂಟರು ಆಲೋಚಿಸುತ್ತಿರುವರು. ಆ ವಿಷಯವನ್ನವರು ಬರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದಿಡಲಿರುವರು. ದೇಶದ ಏಕ ಮಾತ್ರ ರಾಷ್ಟ್ರೀಯ ಸಂಸ್ಥೆಯಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಕಳೆದ 50 ವರ್ಷಗಳಿಂದ ಎಡೆಬಿಡದೆ ಪ್ರಯತ್ನಿಸಿಕೊಂಡು ಬಂದು ಜನ ಪ್ರೀತ ಹಾಗೂ ಲೋಕಮಾನ್ಯವಾಗಿರುವ ಕಾಂಗ್ರೆಸ್ಸಿನ ಸುವರ್ಣೋತ್ಸವವು ಯೋಗ್ಯ ರೀತಿಯಲ್ಲಿ ನಡೆಸಲ್ಪಡುವುದು ಅವಶ್ಯವೆಂದು ಕಾಂಗ್ರೆಸ್ ಪಕ್ಷಿಯರಲ್ಲರ ಅಭಿಪ್ರಾಯವಾಗಿದೆ ಅದು ಯಾವ ರೂಪದಲ್ಲಿ ಆಚರಿಸಲ್ಪಡುವುದೆಂಬುದು, ಮುಂದೆ ನಿಶ್ಚಯಿಸಲ್ಪಡುವುದು. ಕಾಂಗ್ರೆಸಿನ ಸಂಪೂರ್ಣ ಇತಿಹಾಸವನ್ನೊಳಗೊಂಡ ಪುಸ್ತಕವೊಂದನ್ನು ಪ್ರಕಟಿಸಬೇಕು. ಕಾಂಗ್ರೆಸ್ಸಿನ ಕಾರ್ಯ ಕಲಾಪಗಳ ಕೇಂದ್ರಗಳಲ್ಲಿ ಪ್ರತಿಮೂರ್ತಿಗಳನ್ನು ಸ್ಥಾಪಿಸಬೇಕೆಂದೆಲ್ಲಾ ಕೆಲವರ ಸೂಚನೆ.

ನಿರ್ಭಾಗ್ಯ ಭಾರತ.

ಇದೇನು! ರುದ್ರನ ಲೀಲೆಯೇ!!

ಉತ್ತರದಲ್ಲಿ ಭಯಂಕರ ಭೂಕಂಪ.

ದಕ್ಷಿಣದಲ್ಲಿ ಎಲ್ಲೆಲ್ಲೂ ಬಿಂಕಿಯ ಅನಾಹುತ,

ಚಿಸಿಲಿನ ತಾಪ, ನೀರಿನ ಅಭಾವ.

ಉತ್ತರದ ವಿಚಾರ ನೋಡಿ.

ಬಲುಚಿಸ್ತಾನದ ಕ್ವೆಟ್ಟಾ ನಗರದಲ್ಲಿ ಹೆಣಗಳು ಕೊಳೆಯುತ್ತಿವೆ! ರಣಹದ್ದುಗಳು ಸಂತೋಷದಿಂದ ಹೊಟ್ಟೆ ತುಂಬಿಕೊಳ್ಳುತ್ತಿವೆ! ಕ್ವೆಟ್ಟಾ ನಗರವು ಇಂದು ಭೀಕರವಾದ ಮಹಾ ಸ್ಮಶಾನ!

ನಗರದಲ್ಲಿ ಮೂರನೆ ಭಾಗದ ಜೀವಹಗಳು ಕೆಲವೆಲ್ಲ ಉಂಟಾದ ದುರ್ವಾಸನೆಯ ತಲೆಗೆ 'ಗ್ಯಾಸ್ ಮಾಸ್ಕ್' ಮುಸುಕುಗಳಿಲ್ಲದೆ ಅತ್ಯಿತ್ತ ಚಲಿಸಲಾರದಂತೆ ನಿರ್ಭಂದಿಸುತ್ತಿದೆ. ಜನರು ಸ್ವೇಚ್ಛೆಯಾಗಿ ತಿರುಗದಂತೆ ಕಟ್ಟಪ್ಪಣೆ ಇದೆ. ಕ್ವೆಟ್ಟಾ ಕಡೆಗೆ ಪ್ರಯಾಣ ಬೆಳೆಸಲು ಇಚ್ಛಿಸುವವರಿಗೆ ಟಿಕೇಟುಗಳು ದೊರೆಯದಂತೆ ಸರ್ಕಾರಿ ಆಜ್ಞೆ.

ಸತ್ತವರಿಗೆ ಶಾಸ್ತ್ರೋಕ್ತ ಉತ್ಕ್ರೇಷ್ಟ 'ಸತ್ಕಾರ'ವಿಲ್ಲ. ಸತ್ಕಾರ! ಎಂತಹ ಪರಿಹಾಸ್ಯದ ಶಬ್ದವಿದೆ! ತಂದೆಯ ಶವದ ಮುಂದೆ ಮಗನಿಲ್ಲ ತಂದೆಯೂ ಮಗನೂ ಶವವಾಗಿರುವರು! ಇಬ್ಬರೂ ಜತೆಯಲ್ಲೇ!

ಎಲ್ಲರೂ ಒಂದೇ.

ಕ್ವೆಟ್ಟಾದಲ್ಲಿ ಇಂದು ಎಲ್ಲರೂ ಸಹೋದರರು. ಹಿಂದು ಗಳೂ, ಮುಸಲ್ಮಾನರೂ ಒಂದೇ ಚಿತೆಯಲ್ಲಿ ನಿದ್ರಿಸುತ್ತಿದ್ದಾರೆ! ಹೊಲೆಯನೂ, ಬ್ರಾಹ್ಮಣನೂ ಒಬ್ಬರನ್ನೊಬ್ಬರು ಮತ್ತೊಬ್ಬರನು ಪೂಡಿಸಿರುವರು! ಈರ್ಷೆ ಇಲ್ಲ, ಮತ್ಸರವಿಲ್ಲ, ತಾತ್ಸಾರವಿಲ್ಲ, ಕೋಪವಿಲ್ಲ, ಮೇಲು—ಕೀಳು ಭೇದ ಭಾವಗಳಿಲ್ಲ;—ಎಲ್ಲ ಹೃದಯಗಳೂ ನಿರ್ಮಲವಾಗಿವೆ.

ಕಲತ್ ನಗರ.

ಕ್ವೆಟ್ಟಾದಂತೆ ಧ್ವಂಸವಾದ ಮತ್ತೊಂದು ನಗರವೆಂದರೆ ಕಲತ್ ನಗರ. ಈ ನಗರವೂ, ಖಾನರ ಅರಮನೆಯೂ ನೆಲಸಮವಾಗಿವೆ! ಖಾನರೂ, ಕುಟುಂಬವೂ ಮೃತ್ಯುವಿನಿಂದ ಪಾರಾಗಿರುವರು.

ಮೃತ ಹೊಂದಿದ ಬ್ರಿಟಿಷರು.

ಸುಮಾರು 250 ಬ್ರಿಟಿಷರು ಬ್ರಿಟಿಷರು ಈ ಕಂಪನದಲ್ಲಿ ಬಲಿಯಾಗಿರಬಹುದೆಂದು ಎಣಿಕೆಯಾಗಿದೆ. ರಾಯಲ್ ಎರ್ ಫೋರ್ಸಿನವರೇ ಅಧಿಕ.

ಒಟ್ಟು ನಷ್ಟ.

ಕ್ವೆಟ್ಟಾ ನಗರದಲ್ಲಿ ಸುಮಾರು ಮೂರು ಕೋಟಿ ರೂಪಾಯಿಗಳ ಸೊತ್ತು ನಷ್ಟವಾಗಿರಬಹುದೆಂದು ಒಂದು ಅಂದಾಜು! (ಬಿಹಾರದಲ್ಲಿ ಸುಮಾರು 12 ಕೋಟಿ ರೂಪಾಯಿಗಳ ನಷ್ಟವಾಗಿತ್ತು. ಆದರೆ ಪ್ರಾಣ ಹಾನಿ ಮಾತ್ರ 8 ಸಾವಿರ.)

ಜಾನುವಾರುಗಳೇ ಇಲ್ಲ!

ಜಾನುವಾರುಗಳು ಸತ್ತುದಕ್ಕೂ ಲೆಕ್ಕವೇ ಇಲ್ಲ. ದನ, ಎಮ್ಮೆಗಳು ಸಾವಿರಾರು ಸತ್ತಿವೆ; ನಾಯಿ, ಕೋಳಿಗಳೂ ಹಲವು ಸತ್ತು, ಕೊಳೆಯುತ್ತಿವೆ. ಕ್ವೆಟ್ಟದಲ್ಲಿ ಜಾನುವಾರುಗಳೇ ಗೋಚರಿಸುವುದಿಲ್ಲ!

ಕಂದಹಾರ್ ಮತ್ತು ಚಮನ್

ಇದು ದಕ್ಷಿಣ ಅಫಘಾನಿಸ್ತಾನದ ಒಂದು ಮುಖ್ಯ ವಾಪಾರೀ ಕೇಂದ್ರ. ಚಮನ್—ಇದು ಬಲುಚಿಸ್ತಾನದ ಬ್ರಿಟಿಷ್ ಗಡಿಯ ಒಂದು ಮಹತ್ವದ ಊರು. ಇವೆರಡೂ ನಗರಗಳೂ ಕಂಪನದಲ್ಲಿ ಕಷ್ಟ—ನಷ್ಟಗಳಿಗೀಡಾಗಿವೆ.

ಪರ್ವತವು ಇಬ್ಭಾಗವಾಯಿತು!
ಮತ್ತೊಂದು ಕಂಪನ!!

ಎರಡನೆಯ ಕಂಪನವೊಂದು, ನಡು ಹಗಲಲ್ಲಿ ಮತ್ತೊಮ್ಮೆ ಉಂಟಾಯಿತಷ್ಟೆ. ದೂರದಲ್ಲಿ ಒಂದು ಪರ್ವತವು, ಅತಿ ಭಯಂಕರವಾಗಿ ಸಿಡಿಲಿನಂತೆ ಶಬ್ದ ಮಾಡುತ್ತ ಇಬ್ಭಾಗವಾಯಿತು! ಅದರಿಂದುಂಟಾದ ಮಹಾ ಬಿರುಕಿನಿಂದ ಧೂಳಿಯ ಮೋಡಗಳೆದ್ದು, ಕೆಲವು ಮೈಲುಗಳ ಅಂತರವನ್ನು ಕೆಂಪಗೆ ಮುಚ್ಚಿಬಿಟ್ಟವು! ಭಾಗವಾದ ಪರ್ವತವು ಸುಮಾರು 14000 ಅಡಿ ಉನ್ನತವಾಗಿತ್ತು!

ದೈವ ಕೃಪೆಯಿಂದ ಪಾರಾಯಿತು.

ಒಂದು ಮನೆಯಲ್ಲಿ ಆರು ವಯಸ್ಸಿನ ಚಿಕ್ಕ ಮಗು ಹೊತು ಹೋಗಿ ಕೂಗುತ್ತಿತ್ತು. ನೋಡಲಾಗಿ, ಉಕ್ಕಿನ ತಗಡು ಮೈಮೇಲೆ ಮಾಡಿನಂತೆ ನಿಂತಿರುವ ಕಾರಣ ಅದು ಜಜ್ಜಿ ಹೋಗಿರಲಿಲ್ಲ! ಹೀಗೆಯೇ ಇನ್ನೆಷ್ಟೋ ಜನರು ಬದುಕಿ ಕೊಂಡಿರುವರೋ.

ಚಿಕ್ಕ ಹಳ್ಳಿ—ಕೋಲ್ಪ್ಪರ.

ಕೊಲ್ಪ್ಪರ ಎಂಬ ಒಂದು ಹಳ್ಳಿಯು ನಾಶವಾಗಿ ಅದರೊಂದಿಗೆ 113 ಜನರೂ ನಿರ್ನಾಮವಾಗಿರುವರು!

ಉಳಿದವರೆಷ್ಟು?

ಉಳಿದುಳಿದವರು ಸುಮಾರು ಸುಮಾರು 10000 ಮಂದಿ ಇವರೆಲ್ಲ ರೈಲು ಹತ್ತಿ ಕರಾಚಿ, ಲಾಹೋರ್ ಮೊದಲಾದ ಕಡೆಗೆ ಪ್ರಯಾಣ ಬೆಳೆಸುತ್ತಿರುವರು. ರೈಲಿನಲ್ಲಿ ಯಾವ ಗತಿಯಲ್ಲೂ ಇವರಿಗೆ ಟಿಕೇಟಿಲ್ಲ.

ದಕ್ಷಿಣದ ವಿಷಯ ಕೇಳಿ.

ಬಿಂಕಿಯ ಹಾವಳಿ.

ಇದೇ ತಾ. 3ರಲ್ಲು ಎಲ್ಲೂರು ಪಟ್ಟಣದಲ್ಲಿ 2 ಭೀಕರ ಸಾಮಾನುಗಳ ಅಂಗಡಿ, ಒಂದು ವಿದೇಶಿ ಸಾರಾಯಿ ಅಂಗಡಿ ಮತ್ತೊಂದು ಬಟ್ಟೆಯ ಅಂಗಡಿಯು ಸುಟ್ಟು ಹೋಗಿ ರೂ. 20,000 ದಷ್ಟರ ಸಾಮಾನುಗಳೇ ನಷ್ಟವಾಗಿವೆ. ಎಲ್ಲೂರಿನ 4 ಮೈಲು ದೂರದ ದೆಂದುಲೂರು ಎಂಬ ಹಳ್ಳಿಯಲ್ಲಿ ಬಿಂಕಿಯೆದ್ದು 200 ಮನೆಗಳು ಸುಟ್ಟುಹೋಗಿರುವವು.

ಇದೇ ತಾ. 2ರಲ್ಲು ತಿರುಪತಿಯ ಬಳಿಯಿಂದ್ದ ಮಂಗಲಸ್ವೆಯಲ್ಲಿ ಬೆಂಕಿಯೆದ್ದು 50 ಮನೆಗಳು ಸುಟ್ಟು ಹೋಗಿರವು. ಅದೇ ದಿನ ಮಧ್ಯಾಹ್ನ ಗಾಲಿ ರಸ್ತೆಯಲ್ಲಿ ಇನ್ನೊದು ಬೆಂಕಿಯೆದ್ದು 150 ಮನೆಗಳು ಸುಟ್ಟುಹೋಗಿರುವ ನೂರಾರು ಮಂದಿ ನಿರಾಶ್ರಿತರಾಗಿರುವರು.

ಇದೇ ತಾ. 2ರಲ್ಲು ಗುಂತಕಲ್ ರೈಲ್ವೇ ಸ್ಟೇಶನ್ನಿನಲ್ಲಿ ಬೆಂಕಿಯೆದ್ದು 90 ಗುಡಿಸಲುಗಳೂ 2 ದೊಡ್ಡ ಮನೆಗಳೂ ಸುಟ್ಟು ಹೋಗಿರುವವು.

ಗುಂಟೂರಿನಿಂದ 12 ಮೈಲು ದೂರದ ಹನುಮೂರ್ಲಾಡಿ ಎಂಬಲ್ಲಿ ಇದೇ ತಾರೀಕು 3 ರಲ್ಲು ಬೆಂಕಿ ಎದ್ದು ಬಹುತೇಕ ಇಡೀ ಗ್ರಾಮವೇ ಸುಟ್ಟು ಹೋಗಿ ಕೆಲವೇ ಮನೆಗಳು ಉಳಿದಿರುವೆವು ಬೆಜ್ವಾಡ ಪಟ್ಟಣದಲ್ಲಿ ಎರಡು ಸೆಲಗಡ್ಡೆ ಗೋದಾನುಗಳು ಸುಟ್ಟುಹೋಗಿರುವೆವು. ಈ ಬೆಂಕಿಯ ಒಂದೆಡೆ ಹತ್ತಿರದ ಗಾಂಧಿನಗರದ ಒಂದು ಗುಡಿಸಲಿಗೆ ಬಿದ್ದು ಹಬ್ಬಿ 25 ಗುಡಿಸಲುಗಳು ಸುಟ್ಟುಹೋಗಿರುವವು. ನಾಲ್ಗಿಯ ಕೆಲವು ಹಳ್ಳಿಗಳಲ್ಲಿ ಬೆಂಕಿ ಎದ್ದು ಒಟ್ಟು 200 ಮನೆಗಳು ಸುಟ್ಟುಹೋಗಿವೆ. 800 ರೂ. ಗಳ ಕರೆನ್ಸಿ ನೋಟುಗಳು ಸುಟ್ಟುಹೋಗಿವೆ.

ಇದೇ ತಾ. 3ರಲ್ಲು ರಾವಲ್‌ಪಿಂಡಿಯಲ್ಲಿ ಭಯಂಕರ ಬೆಂಕಿಯೆದ್ದು 20 ಅಂಗಡಿಗಳು ಸುಟ್ಟುಹೋಗಿ ರೂ. 4 ಲಕ್ಷ ನಷ್ಟವಾಗಿರುವುದು. ಸೈನಿಕರು ಬಂದು ಬೆಂಕಿಯನ್ನು ನಂದಿಸಲು ಒಹಳ ಸಹಾಯ ಮಾಡಿದರು.

ತಿನ್ನವೆಲ್ಲಿಯ ವಡಕ್ಕು ಅಚ್ಚಪಟ್ಟಿ ಎಂಬ ಹಳ್ಳಿಯ 150 ಮನೆಗಳು ಭಸ್ಮವಾದುವು 500 ಆದಿದ್ರಾವಿಡರು ನಿರಾಶ್ರಿತರಾದರು. ತಿನ್ನವೆಲ್ಲಿ ನಗರದೊಳಗೆ 18 ಮನೆಗಳು ಆಹುತಿಯಾದುವು. ಚೆಂಗಲ್ಪಟ್ಟಿನ ಜಾನ್ಸನಗಿರೀಶ್ವರ ಪೇಟೆಯಲ್ಲಿ 6 ಮನೆಗಳು ಸುಟ್ಟುಹೋದುವು! ಬೆಜವಾಡದ ಕಂಸಿಡು ಎಂಬಲ್ಲಿ 50 ಹುಂಜು ಮಾಡುಗಳ ಮನೆಗಳೂ 100 ಗೊಸಲುಗಳೂ ನಿರ್ನಾಮವಾಗಿ ಸಾವಿರ ಜನರು ವೈಡ್ಡಾನು ಪಟ್ಟಣದಲ್ಲಿ ವಾಸಿಸಬೇಕಾಗಿದೆ! ನಷ್ಟ—1½ ಲಕ್ಷ ರೂಪಾಯಿ! ಪಕೊಂಡ ಎಂಬಲ್ಲಿ ಎಂಬಲ್ಲಿ ಕೆಲವು ಮನೆಗಳು; ಕೊಳವೆ ಎಂಬಲ್ಲಿ 10 ಮನೆಗಳು; ವೊದಕ್ಕೂರಿನಲ್ಲಿ 27 ವಿಠಲೇಪಟ್ಟಣದಲ್ಲಿ 2 ಗುಂಟೂರಿನಲ್ಲಿ ಹತ್ತಿಪ್ಪತ್ತು ಭಸ್ಮವಾದವು

ಸಹಿಸಲಾರದ ಸೆಖೆ.

ಇಷ್ಟಲ್ಲದೆ ಸೆಖೆಯ ತಾಪದಿಂದ ಎಷ್ಟೋ ಮಂದಿ ಮಕ್ಕಳು ದೊಡ್ಡವರು ಬೆಂದು ಸಾಯುತ್ತಲಿರುವರು.

ವಿಪರೀತವಾದ ಸೆಕೆಯ ತೆರೆಗಳಿಂದ ಗುಂಟೂರು ಪಟ್ಟಣದಲ್ಲಿ 2 ಮುಕ್ಕಳೂ, ಬೆಜ್ವಾಡದಲ್ಲಿ ಮಿ. ಐಸಾಕ್ ಎಂಬ ಟೆಲಿಗ್ರಾಫ್ ಇನ್‌ಸ್ಪೆಕ್ಟರೂ, ಒಬ್ಬ ರೈಲ್ವೆ ಪ್ರಯಾಣಿಕ ಸತ್ತರು. ಲಕ್ನೋದಲ್ಲಿ ಒಬ್ಬ ಮಿಲಿಟರಿ ಪೈವೇಟನೂ, ಧಾರವಾಸಿನಲ್ಲಿ ಎಂ ಎಸ್. ಎಂ. ರೈಲ್ವೆ ಆಫೀಸ್ ಸುಪರಿಂಡೆಂಟ್ ಮಿ. ಕೈಟ್ ಎಂಬ ಯೂರೋಪಿಯನೂ ಇದೇ ತೀರ್ಥಯಾತ್ರೆಯನ್ನು ಮಾಡಿದರು.

ನೀರಿನ ಅಭಾವ.

ಮಳೆ ಇಲ್ಲದೆ ನೀರಿನ ಗೋಳು ಹೇಳಲಸಾಧ್ಯ ಕೊನಂಥ ದೇಶದಲ್ಲೆ ನೀರಿನ ಗೋಳು ಕೇಳಿಬರುತ್ತಿರುವಾಗ್ಗೆ ತರ ದೇಶಗಳ ವಿಚಾರ ಹೇಳಬೇಕೇ.

ಈ ವಾರದ ಪ್ರಾರ್ಥನೆ.

ಇಂದು ಮಹಾತ್ಮ ಗಾಂಧಿಜೀಯವರ ಹೆಸರನ್ನು ತಿಳಿಯದ ಮನೆಯೇ ಇಲ್ಲವೇ ಇಲ್ಲ. ಪ್ರತಿಯೊಂದು ಮಗುವೂ ಸಹ ಇವರ ಹೆಸರಿನಿಂದ ಪರಿಚಿತವಾಗಿದೆ. ಇವರು ದೇಶಕ್ಕಾಗಿ ತಮ್ಮ ಸರ್ವಸ್ವವನ್ನೂ ಅರ್ಪಣೆ ಮಾಡಿದ್ದಾರೆ ಇವರು ಈಶ್ವರ ಪ್ರಾರ್ಥನೆಯ ವಿಷಯದಲ್ಲಿ ತಮ್ಮ ಅನುಭವವನ್ನು ಮೊನ್ನೆ ಮೊನ್ನೆ ಪ್ರಕಟಪಡಿಸಿದ್ದಾರೆ. ಪಾತಕರು ಅವ್ಯವಾಣಿಗಳನ್ನು ಮನನಮಾಡಿ ಅದರಂತೆ ಆಚರಿಸಿದರೆ ಭವಿಷ್ಯದ ಕಂಟಕಾಕೀರ್ಣವಾದ ಹಾದಿಯು ಪರಿಷ್ಕಾರವಾಗುವುದಲ್ಲದೆ ಸುಖಿಗಳಾಗಬಹುದು. ಈ ವಿಶ್ವಾಸದಿಂದಲೇ ಪ್ರೇರಿತರಾಗಿ ಆ ಅಮೂಲ್ಯವಾಣಿಯನ್ನು ಸ್ವಲ್ಪ ಪರಿವರ್ತನೆಗೊಂದಿಗೆ ಇಲ್ಲಿ ಪ್ರಕಟಗೊಳಿಸಿದೆ.

'ಈಶ್ವರ ಪ್ರಾರ್ಥನೆಯು ನನ್ನ ಜೀವನವನ್ನು ಪಾವಾಡಿಸಿದೆ. ನನ್ನ ಜೀವನದಲ್ಲಿ ಈಶ್ವರ ಪ್ರಾರ್ಥನಾ ಶಕ್ತಿಯಿಲ್ಲದಿದ್ದಿದ್ದರೆ ನಾನು ಇದು ವರೆಗೆ ಹುಚ್ಚನಾಗಿಬಿಡುತ್ತಿದ್ದೆ. ನನಗೆ ನನ್ನ ಜೀವನದಲ್ಲಿ ಅನೇಕ ಕಷ್ಟಗಳನ್ನು ಸಹಿಸಬೇಕಾಯಿತು ಮತ್ತು ಹೆಜ್ಜೆ ಹೆಜ್ಜೆಗೂ ವಿಘ್ನಗಳನ್ನು ಎದುರಿಸಬೇಕಾಯಿತು. ನನ್ನ ಕಷ್ಟಗಳನ್ನೂ ವಿಘ್ನಗಳನ್ನೂ ದೂರಪಡಿಸುವುದರಲ್ಲಿ ಈಶ್ವರ ಪ್ರಾರ್ಥನೆಯ ಹೊರತು ಮತ್ತಾವುದರಿಂದಲೂ ಸಹಾಯವಾಗಲಿಲ್ಲವೆಂದು ನಿಸ್ಸಂಕೋಚವಾಗಿ ಹೇಳಬಲ್ಲೆ. ನನ್ನ ಆತ್ಮಕ್ಕೆ ಶಾಂತಿಯನ್ನು ಕೊಡಲು ಇದರ ಹೊರತು ಇಡೀ ಜಗತ್ತಿನಲ್ಲಿ ಮತ್ತಾವ ಸಾಧನವೂ ಇಲ್ಲ.

'ಯದ್ಯಪಿ ಸತ್ಯವು ನನ್ನ ಜೀವನದ ಒಂದು ಅಂಗವಾಗಿದೆ, ಆದರೆ ಈಶ್ವರ ಪ್ರಾರ್ಥನೆಯು ನನ್ನ ಜೀವನದ ಒಂದು ಅವಶ್ಯಕ ವಸ್ತುವಾಗಿದೆ. ಇದರ ಹೊರತು ನನ್ನ ಜೀವನದ ಧಾರೆಯು ಬಂಧಿತವಾಗುತ್ತದೆ.

'ಈಶ್ವರ ಪ್ರಾರ್ಥನೆಯ ಅವಲಂಬನೆಯು ನನಗೆ ಇಲ್ಲದಿದ್ದರೆ ನಾನು ಈ ಸಂಸಾರವೆಂಬ ವಿಚಿತ್ರವಾದ ಸುಳಿಯಲ್ಲಿ ಎಂದಿಗೂ ಸುಖಿಯಾಗುತ್ತಿರಲಿಲ್ಲ. ನನಗೆ ಈಶ್ವರನಲ್ಲಿ ವಿಶ್ವಾಸವು ಹೆಚ್ಚಿದಂತೆಲ್ಲಾ ಈಶ್ವರ ಪ್ರಾರ್ಥನೆಗಾಗಿ ನಾನು ಉತ್ಸುಕನಾದೆ. ಅದರ ಹೊರತು ನನಗೆ ಶಾಂತಿ ಇಲ್ಲ, ಅಲ್ಲದೆ ಜೀವನವು ನೀರಸವಾಗಿಯೂ, ಅಂಧಕಾರಮಯವಾಗಿಯೂ ಕಾಣುತ್ತದೆ.

'ನಾನು ಈಶ್ವರ ಪ್ರಾರ್ಥನೆಗೆ ಮೊಟ್ಟಮೊದಲು ಪ್ರಾರಂಭಮಾಡಿದಾಗ ಈಶ್ವರನಲ್ಲಿ ನನಗೆ ನಂಬಿಕೆ ಇರಲಿಲ್ಲ. ಇಂತಹ ಸ್ಥಿತಿಯಲ್ಲಿ ಕ್ರಮೇಣ ಪ್ರಾರ್ಥನೆಯು ಹೊರತು ಆತ್ಮದ ಕೆಲಸವು ನಡೆಯಲಾರದೆಂಬುದನ್ನು ನಾನು ಅನುಭವಿಸಿದೆನು. ನಿಜವಾಗಿ ನೋಡಿದರೆ ಆತ್ಮಕ್ಕೆ ಪ್ರಾರ್ಥನೆಯ ಆವಶ್ಯಕತೆ ಇದ್ದಷ್ಟು ಶರೀರಕ್ಕೆ ಭೋಜನದ ಆವಶ್ಯಕತೆ ಇಲ್ಲ. ಇದಕ್ಕೆ ಕಾರಣವೇನೆಂದರೆ ಶರೀರವನ್ನು ಸ್ವಸ್ಥಿತಿಯಲ್ಲಿಡಬೇಕಾದರೆ ಆಗಾಗ್ಗೆ ಉಪವಾಸ ಮಾಡುವುದು ಅವಶ್ಯವಾಗಿರುತ್ತದೆ; ಆದರೆ ಈಶ್ವರ ಪ್ರಾರ್ಥನೆಯು ವಿಷಯದಲ್ಲಿ ಈಶ್ವರ ಪ್ರಾರ್ಥನೆಯಂತಹ ಉಪವಾಸದ ವಿಷಯವಿಲ್ಲ. ಈಶ್ವರ ಪ್ರಾರ್ಥನೆಯ ಹೊರತು ಒಂದು ಕ್ಷಣವೂ ಕೆಲಸ ನಡೆಯಲಾರದು.

'ಪ್ರಪಂಚದ ದೊಡ್ಡ ಉಪದೇಶಕರಾದ ಬುದ್ಧ, ಏಸು, ಪೈಗಂಬರ್ ಮಹಮ್ಮದ್ ಈ ಮೂವರೂ ಅದ್ಭುತ ಆದರ್ಶಗಳನ್ನು ಬಿಟ್ಟು ಹೋಗಿದ್ದಾರೆ. ಅವರಿಗೆ ಪ್ರಾರ್ಥನೆಯಿಂದಲೇ ಜ್ಞಾನ ಜ್ಯೋತಿಯು ದೊರೆಯಿತು. ಅದರ ಹೊರತು ಅವರು ಜೀವಿಸಲಾರದವರಾಗಿದ್ದರು.

'ಲಕ್ಷಾಂತರ, ಹಿಂದೂ, ಈಸಾಯಿ ಮತ್ತು ಮುಸಲ್ಮಾನರು ತಮ್ಮ ಜೀವನದಲ್ಲಿ ಪ್ರಾರ್ಥನೆಯಿಂದಲೇ ಇಂದಿಗೂ ಶಾಂತಿಯನ್ನು ಹೊಂದುತ್ತಾರೆ. ಅವನ್ನು ತಾವು ಅನಾಧಭಾವಗಳೆಂದಾದರೂ ತಿಳಿಯಿರಿ, ಹೇಗಾದರೂ ತಿಳಿಯಿರಿ. ಈ ಅವನತ ದೆಶೆಯಲ್ಲಿಯೂ ನನಗೆ ಅದರಿಂದ ಅಪರಿಮಿತ ಆನಂದವು ದೊರೆಯುತ್ತಿದೆಯೆಂದು ಧಾರಾಳವಾಗಿ ಹೇಳಬಲ್ಲೆ.

'ನಾನು ದೊಡ್ಡ ಜ್ಞಾನಿಯಲ್ಲ. ಆದರೂ ನಾನು ಪ್ರಾರ್ಥನೆ ಮಾಡತಕ್ಕ ಮನುಷ್ಯನೆಂದು ಎದೆ ತಟ್ಟಿಕೊಂಡು ಹೇಳಬಲ್ಲೆ. ಯಾವ ತರಹವಾಗಿ ಪ್ರಾರ್ಥನೆಮಾಡಬೇಕೆಂಬ ಗೊಂದಲದಿಂದ ನಾನು ದೂರನಾಗಿದ್ದೇನೆ. ಏಕೆಂದರೆ ಈ ವಿಷಯದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸ್ವಯಂ ಒಂದು ಕಾನೂನಿದೆ. ಆದರೆ ಕೆಲವು ಆರಿಸಿದ ದಾರಿಗಳಿವೆ. ಮತ್ತು ಅವರವರ ಪೂರ್ವಜರು ಯಾವ ಕಡೆಗೆ ಇಂಗಿತ ಮಾಡಿದ್ದಾರೆಯೋ ಆ ಕಡೆಗೆ ಹೋಗುವುದು ಎಲ್ಲರಿಗೂ ಎಲ್ಲಕ್ಕಿಂತಲೂ ಒಳ್ಳೆಯದು. ಅವರು ಅದರಂತೆಯೇ ನಡೆಯಬೇಕು.

'ಯಾರ ಮನಸ್ಸನಲ್ಲಾದರೂ ಈಶ್ವರನ ಕಡೆಗೆ ವಿಶ್ವಾಸ ಹುಟ್ಟಿಸುವುದು ನನ್ನ ಶಕ್ತಿಯ ಹೊರಗಣ ಮಾತು. ಪ್ರಪಂಚದಲ್ಲಿ ಸ್ವಯಂ ಪ್ರಮಾಣಗಳಾದ ವಿಷಯಗಳು ಕೆಲವಿವೆ—ಅವುಗಳನ್ನು ಸಿದ್ಧಪಡಿಸುವುದರಲ್ಲಿ ಯಾವ ತೊಂದರೆಯೂ ಇಲ್ಲ—ಸಕಾರಣವಾಗಿ ಸಿದ್ಧಪಡಿಸುವದಕ್ಕಾಗದಿರುವಂತಹವೂ ಕೆಲವಿವೆ. ದೇಹಾಗಣಿತದಲ್ಲಿ ಕೆಲವು ಪ್ರಕ್ರಿಯೆಗಳು ಸ್ವಯಂ ಸಿದ್ಧವಾಗಿವೆ—ಅವುಗಳನ್ನು ಸಿದ್ಧಪಡಿಸಲು ಉಪಪತ್ತಿಯ ಅವಶ್ಯಕತೆ ಇಲ್ಲ. ಈಶ್ವರನ ಅಸ್ತಿತ್ವವೂ ಇದೇ ರೀತಿಯಾಗಿದೆ. ಅದರ ಉಪಪತ್ತಿಯು ಮಾನವ ಹೃದಯದ ಎಲ್ಲೆಯನ್ನೆ ಮೀರಿದ. ಈ ವಿಷಯದಲ್ಲಿ ಬುದ್ಧಿಯ ಕಾಲು ಕುಂಟಾಗುತ್ತದೆ. ಅದರ ವಿಚಾರವು ಬಹುಮಟ್ಟಿಗೆ ಭ್ರಮೆಯಿಂದ ಸಿದ್ಧವಾಗುತ್ತದೆ. ಏಕೆಂದರೆ ತರ್ಕದ ಆಧಾರದಿಂದ ಈಶ್ವರನನ್ನು ನಂಬಲಾಗುವುದಿಲ್ಲ—ಈಶ್ವರನ ವಿವೇಚನೆಯನ್ನು ಕಾರಣವನ್ನು ದಾಟಿ ಹೋಗುತ್ತದೆ. ಈಶ್ವರನ ಅಸ್ತಿತ್ವವನ್ನು ಸಿದ್ಧಗೊಳಿಸುವ ಎಷ್ಟೋ ಸಿದ್ಧಾಂತಗಳಿವೆ.

'ನಾನು ಹೇಳುವುದೇನೆಂದರೆ— ಈಶ್ವರನ ಅಸ್ತಿತ್ವವನ್ನು ತರ್ಕದ ತಕ್ಕಡಿಯ ಮೇಲಿಟ್ಟು ತಮ್ಮ ಬುದ್ಧಿವಂತಿಕೆಯ ಅಪಮಾನ ಮಾಡಿಕೊಳ್ಳಬೇಡಿ; ಬದಲಾಗಿ ಎಸರೂ ಅರಿಯದ ಬಾಲಕನಂತೆ ಈಶ್ವರನಲ್ಲಿ ನಂಬಿಕೆ ಇಡಲು ಪ್ರಾರಂಭಿಸಿ ಸತ್ಫಲವಾಗಿ ನನ್ನ ಅಸ್ತಿತ್ವವಿದ್ದರೆ ಈಶ್ವರನದೂ ಇದೆಯೆಂದು ತಿಳಿದುಕೊಳ್ಳಿ. ಈಶ್ವರನ ಅಸ್ತಿತ್ವಕ್ಕೆ ನಾನೇ ಪ್ರಮಾಣವೆಂದು ತಿಳಿದುಕೊಂಡರೆ ಸಾಕು. ಈಶ್ವರನ ವಿಷಯದಲ್ಲಿ ಯಾವ ವಿಚಾರವನ್ನೂ ಪ್ರಕಟಮಾಡಲಾರದವರಾದರೂ ಎಲ್ಲಾ ಮನುಷ್ಯರಿಗೂ ಇದೇ ಪ್ರಮಾಣ ಸಾಕಾಗಿದೆ. ಆದರೆ ಅವರ ಜೀವನದ ಮೇಲೆ ದೃಷ್ಟಿಪಾತ ಮಾಡಿದರೆ ಈಶ್ವರನು ಅವರ ಜೀವನದ ಒಂದು ಅಂಗವೆಂದು ಗೊತ್ತಾಗುತ್ತದೆ. 'ನೀವು ತಮ್ಮ ಚಂಚಲ ವಿಶ್ವಾಸವನ್ನು ದೃಢಗೊಡಿರೆಂದು ನಾನು ನಿಮ್ಮಲ್ಲಿ ನಿವೇದನಮಾಡಿಕೊಳ್ಳುತ್ತೇನೆ ಹೀಗೆ ಮಾಡುವುದಲ್ಲಿ ನಿಮಗೆ ರಾಶಿರಾಶಿ ಸಾಹಿತ್ಯ ಪುಸ್ತಕಗಳನ್ನು ಓದಬೇಕಾದ ಅವಶ್ಯಕತೆ ಇಲ್ಲ. ನಂಬುವುದಕ್ಕೆ ಪ್ರಾರಂಭಿಸಿ, ನೀವು ತಮ್ಮನ್ನು ಒಂದು ಅಣುವಿಗಿಂತಲೂ ತುಚ್ಛನೆಂದು ತಿಳಿದುಕೊಳ್ಳುವುದು ವಿನೀತಭಾವನೆಯ ಚಿನ್ಹೆಯಾಗಿದೆ. ಏಕೆಂದರೆ ಬ್ರಹ್ಮಾಂಡದಲ್ಲಿ ಒಂದು ಅಣುವೂ ಸಹ ತನ್ನ ಅಸ್ತಿತ್ವದ ಪ್ರಾಣನಾಶಕ್ಕೆ ಒಳಪಟ್ಟಿದೆ. ಆದರೆ ನಾವು ನಮ್ಮ ಅಜ್ಞಾನದ ಉದ್ದಂಡತೆಯಲ್ಲಿ ನಮ್ಮ ಅಸ್ತಿತ್ವವನ್ನು ಮೀರಿತು ಪ್ರಕೃತಿ ವಿಧಾನವನ್ನು ಅಂಗೀಕರಿಸುವುದಿಲ್ಲ. ಒಂದು ಸಲ ತಾವು ಈಶ್ವರನ ಅಸ್ತಿತ್ವದ ಮೇಲೆ ವಿಶ್ವಾಸವಿಡತೊಡಗಿದರೆ ಪ್ರಾರ್ಥನೆಯು ಹೊರತು ಇರಲಾರದು ಅವಿಶ್ವಾಸಿಗಳ ತರ್ಕಕ್ಕೆ ಬೆಲೆಯಾದರೂ ಕಾರಣವಿಲ್ಲ.

'ನನ್ನ ಜೀವನವೆಲ್ಲಾ ಪ್ರಾರ್ಥನಾಮಯವಾಗಿದೆಯೆಂದು ನಾನು ಹೇಳುವುದಿಲ್ಲ. ಪದಕ್ಕಾಗಿಯೇ ಕೆಲಸದ ಸಮಯದಲ್ಲಿ ಪ್ರಾರ್ಥನೆಯಲ್ಲಿ ಕುಳಿತು ಅಲಸಿಗಳೂ ಅಕರ್ಮಣ್ಯರೂ ಆಗಬಾರದು. ಯಾರು ಯಾವಾಗಲೂ ಪರಮಾತ್ಮನ ಚಿಂತನೆಯಲ್ಲಿ ಮಗ್ನನಾಗಿರುತ್ತಾರೆಯೋ ಅವನನ್ನು ಪರಮಾತ್ಮನು ಎಲ್ಲ ಕಷ್ಟಗಳಿಂದಲೂ ಪಾರುಮಾಡುವನೆನ್ನುವುದನ್ನು ಮರೆಯಬೇಡಿ ಮಿತ್ರಕಿರಾ, ದೇವ ದೇವನನ್ನು ಪ್ರಾರ್ಥಿಸಿ. ನಿಮ್ಮನ್ನು ಗುಣವಂತನನ್ನಾಗಿ ಮಾಡುವಂತೆ ಕೇಳಿಕೊಳ್ಳಿ. ದಯಾಪರನಾದ ಭಗವಂತನು ನಿಮ್ಮಲ್ಲಿ ಪ್ರೀತಿಯಿಟ್ಟಿರುವನು.

'ಸರಸ್ವತಿ.'

ಅಲ್ಲಿಯೂ ಅತ್ತೆಮ್ಮನೆ ಅಬ್ಬರವೇ?

(ಲೇಖಕ:—ಪಂಡಿತ್ ಶಾರಾನಾಥ.)

ಕ್ವೆಟ್ಟಾದಲ್ಲಿ ಮೊನ್ನೆಯೇ ಜನಧನಕ್ಕಾದ ಅಪಾರ ಹಾನಿಯು ಈಗ ಜಗತ್ತಿಗೆಲ್ಲಾ ತಿಳಿದ ವಿಷಯವೇ ಆಗಿದೆ. ಭೂದೇವಿಯ ಬಲಪ್ರದರ್ಶನದಿಂದ ಆ ಭಾಗವೆಲ್ಲಾ ನಾಶವಾಗಿ ಹೋಗಿದೆ ಸುಮಾರು 50,000 ಜನರು ಸತ್ತಿರಬಹುದು, ಎಂದು ತಿಳಿದವರು ಹೇಳುತ್ತಿದ್ದಾರೆ. ಈಗಾಗಲೇ ಸಾವಿರಾರು ಹೆಣಗಳನ್ನು ಮಂಣಿನ ರಾಶಿರಾಶಿಗಳಿಂದ ಅಗೆದು ಎತ್ತಿ ಹಾಕಿದ್ದಾಯಿತು. ಅಗೆಯುವಾಗ ಹಲವರು ಜೀವಂತರಾಗಿಯೂ ಹೊರಬಿದ್ದುದುಂಟು. ಇನ್ನು ಜೀವಂತರಾಗಿಯೇ ಹೂಳಲ್ಪಟ್ಟವರು ಇರಬಹುದು ಎಂದು ಅನೇಕರ ಭಾವನೆ ಇದೆ. ಇಂಥಾ ಸತ್ಕಾರ್ಯದ ಅನುಭವದಿಂದ ತುಂಬಿದ ಬಾಬು ರಾಜೇಂದ್ರ ಪ್ರಸಾದರ ಮತವೂ ಹಾಗೆಯೇ ಇದೆ

ಆದರೆ ಅಂಥವರು ಇನ್ನೆಷ್ಟು ದಿನ ಹಾಗೆಯೇ ಬದುಕಿದ್ದಾರು? ಬಿದ್ದ ಕೊಂಪೆಗಳನ್ನು ಎತ್ತಿ ಹಾಕಲಿಕ್ಕೆ ಸಾಕಷ್ಟು ಜನರಿದ್ದು; ಹೂತು ಬಿದ್ದವರನ್ನು ಬೇಗನೇ ಅಗೆದು ಹಾಕಿದರಲ್ಲವೇ ಅಂಥ ಊಹೆಗೆ ತಕ್ಕ ಫಲವೂ ದೊರೆಯುವದು? ಸರ್ ಸೆಮ್ಯುವೆಲ್ ಹೋರ್‌ರಂತೂ ತಮ್ಮ ವಿಷಾದವನ್ನೇನೋ ಪ್ರಕಟಿಸಿ ಬಿಟ್ಟರು. ಆದರೆ ಅದಕ್ಕೆ ತಕ್ಕ ಕಾರ್ಯವೂ ಬೇಡವೇ? ಅದು ಹೇಗಿದೆ?

ಅಂಥ ದೊಡ್ಡ ಭೂಕಂಪದಿಂದ ಹಾಳಾಗಿ ಬಿದ್ದ ಜಾಗೆಯ ವಿಸ್ತೀರ್ಣ ಎಂದರೆ 130 ಮೈಲು ಉದ್ದ 20 ಮೈಲು ಅಗಲ. ಅಷ್ಟು ವಿಶಾಲವಾದ ಪ್ರದೇಶವನ್ನು ಅಗೆದು ಹಾಕಲಿಕ್ಕೆ 6000 ಮಂದಿ ಕೂಲಿಗಳು ಸಾಕೇ? ಅಲ್ಲಿ ಯಜಮಾನಿಕೆ ಮಾಡುವ ಅಧಿಕಾರಿಗಳು ನೇಮಿಸಿದವರ ಸಂಖ್ಯೆಯೇನೋ ಸದ್ಯಕ್ಕೆ ಅಷ್ಟೇ! ಸಾಕೋ ಅಷ್ಟು?

ಅದರ 10 ರಷ್ಟು ಸಂಖ್ಯೆಯಿದ್ದರೂ ಹೆಚ್ಚಾಗದು ಆ ಸಂಖ್ಯೆಗೆ ಲೋಪವೆಲ್ಲಿದೆ ಮತ್ತೆ? ಆ ಜಾಗೆಯ ಅಧಿಕಾರವರ್ಗಕ್ಕೆ ಇನ್ನು ಹೆಚ್ಚಿನ ಸಂಖ್ಯೆಯನ್ನು ನೇಮಿಸುವದು ಸಾಧ್ಯವಿಲ್ಲವಂತೆ. ಇರಲಿ. ಬೇಕಾದಷ್ಟು ನಮ್ಮ ಜನ ಧೈರ್ಯತ್ಯಾಗಗಳಿಂದ ಅದನ್ನು ಪೂರೈಸಲಿಕ್ಕೆ ಸಿದ್ಧರೇ ಆಗಿಲ್ಲವೇ?

ಕಾಂಗ್ರೆಸ್ ಸೆಕ್ರೆಟರಿಗಳಾದ ಆಚಾರ್ಯ ಕೃಪಲಾನಿ ಮತ್ತು ಜಯರಾಮದಾಸ್ ದೌಲತ್‌ರಾಮರು ಅಲ್ಲಿಗೆ ಹೋಗಿದ್ದಾರೆ. ಬಾಬು ರಾಜೇಂದ್ರ ಪ್ರಸಾದರು ಅವರನ್ನಲ್ಲಿಗೆ ಬೇಕಾದ ಸೇವೆಗಾಗಿಯೇ ಕಳುಹಿಸಿದ್ದಾರೆ. ಕರಾಚಿಯ ಮೇಯರ್ ಆಗಿದ್ದ ಜಮಷೆಡ್ ಎನ್. ಮೆಹತಾ ಇವರೂ ಅಲ್ಲಿದ್ದಾರೆ. ಸಾಧು ವಾಸ್ವಾನಿಯವರೂ ಅಲ್ಲಿದ್ದಾರೆ. ಇವರೆಲ್ಲರಿಗೆ ಬೆಂಬಲರಾಗಿ ದುಡಿಯಲಿಕ್ಕೆ ಸಾವಿರಾರು ಯುವಕ ಯುವತಿಯವರೂ ಸಿದ್ಧರೇ ಆಗಿದ್ದಾರೆ. ಆದರೆ ಇವರಿಗೆ ಆ ಪ್ರದೇಶಕ್ಕೆ ಪ್ರವೇಶವೇ ಇಲ್ಲ. ಇವರ ಹೃದಯವು ಅಲ್ಲೂ ಗೊಳಗೇ ಇದ್ದರೂ ಇವರ ಘಟವೇನೋ ಊರಾ ಹೊರಗಿದ್ದೇ ತೀರಬೇಕು! ಇದೇಕೆ?

ಅಲ್ಲಿಯ ಕೆಲಸವನ್ನೆಲ್ಲಾ ಬರೀ ಸೈನ್ಯದ ಇಲಾಖೆಗೆ ಒಪ್ಪಿಸಿ ಕೊಟ್ಟಿದ್ದಾರೆ. ಅವೆಲ್ಲ ಸೇನಾಧಿಪರು ಮನಸಾರೆ ದುಡಿಯುತ್ತಲೇ ಇದ್ದಾರೆಂಬುದು ನಿಜವಾದ ಮಾತು. ಆದರೂ ಅವಧು ಸಾಕಷ್ಟು ಮಾಡಲಾರರು. ಅವರ ಸಂಖ್ಯೆ ಒಹಳ ಕಡಿಮೆ ಅವರ ಕೈಗಳನ್ನು ಸ್ವತಂತ್ರ ಸೇವಕ ವರ್ಗದಿಂದ ಸರಕಾರವು ಏತಕ್ಕೆ ಬಲಪಡಿಸಬಾರದು?

ಈಗ ಆ ಪ್ರದೇಶವೆಲ್ಲ 'ಮಾರ್ಷಲ್ ಲಾ'ಗೆ ಒಳಪಟ್ಟು ಕೊಂಡಿದೆ. ಹೊರಗಿನವರಿಗೆ ಸರಲವಾಗಿ ಒಳಗೆ ಹೋಗಲಿಕ್ಕೆ ಅವಕಾಶವಿಲ್ಲ. ಒಳಗೆ ಹೋಗಲಿಚ್ಛಿಸುವರು ಮೆಜಿಸ್ಟ್ರೇಟರಿಂದಾಗಲೀ, ದೊಡ್ಡ ರೇಲ್ವೆ ಹುದ್ದೇದಾರರಿಂದಾಗಲೀ ಅನುಮತಿಯನ್ನು ಪಡೆದುಕೊಳ್ಳಲೇ ಬೇಕು. ಆದರೆ ಕ್ವೆಟ್ಟಾದ ಅಧಿಕಾರಿಗಳು ತುಮಗೆ ಇನ್ನೂರು ಬೇಕು ಎಂದು ಬರೆಯುವ ತನಕ ಇವರು ಅನುಮತಿ ಕೊಡವೇ ಇಲ್ಲ. ಅಂತೂ ಇಂತೂ ಕೂನೆಯ ಅಧಿಕಾರ ಕ್ವೆಟ್ಟಾದ ಸೇನಾಧಿಕಾರಿಗಳದೇ! ಇದಕ್ಕೆ ಕಾರಣವೇನು?

ವಿಹಾರದಲ್ಲಿ ಸರಕಾರವೂ ಸ್ವಯಂ ಸೇವಕ ವರ್ಗವೂ ಕೂಡಿಯೇ ದುಡಿದು ದೊಸ್ತ ಉಪಕಾರ ಮಾಡಿ ಚಿರಸ್ಮರಣೀಯರಾಗಲಿಲ್ಲವೇ? ಅಂದೆ ಮೇಲೆ ಸರಕಾರಕ್ಕೆ ಇಂಥ ಹಾಳು ಹಟ ಈಗೇತಕ್ಕೆ?

ಕ್ವೆಟ್ಟಾದ ಸ್ಥಾನ ಮಹಿಮೆಯೋ? ಧಣಿಗೆ ಗೊತ್ತು! ಅದೇನೂ ಇರಲಿ—ದಯೆಯಿಂದ ಕಾರ್ಯಾಧಿಕಾರ ವರ್ಗದ ಮಾನವ್ಯವೇ ಈಗ ದೊಡ್ಡದಾಗಬೇಕಾಗಿತ್ತು ಎಂದು ಹೇಳಬೇಕಾಗುತ್ತದಲ್ಲವೇ?

ಕೊಡಗ ವಿದ್ಯಾಭಿವೃದ್ಧಿ ಸಂಘದ ಆಫೀಸಿನಿಂದ
ಮಡಿಕೇರಿ, ತಾ. 11—6—1935.

ನೋಟೀಸು.

ಮೇಲ್ಕಂಡ ಸಂಘದಿಂದ ವೇತನ ಪುಸ್ತಕ ಸಾಲ ಕೇಳಲು ಇಚ್ಛಿಸುವವರು ತಾ 25—6—'35ರ ಒಳಗೆ ಸಂಘದ ಪ್ರೆಸಿಡೆಂಟರವರಿಗೆ ನ್ಯಾಯವಾದ ಅಪ್ಲಿಕೇಷನ್ ಫಾರಂಗಳ ಮೂಲಕ ಅರ್ಜಿ ಬರಕೊಳ್ಳತಕ್ಕದ್ದು. ತಕ್ಕ ಫಾರಂಗಳು ಮೇಲ್ಕಂಡ ಆಫೀಸಿನಲ್ಲಿ ದೊರೆಯುವುದು. ವೇತನ ಮತ್ತು ಸಾಲ ದೊರಕಿದವರ ಹೆಸರುಗಳನ್ನು ಸ್ಥಳೀಕ ಪತ್ರಿಕೆಗಳಲ್ಲು ಪ್ರಕಟಿಸಲಾಗುತ್ತದೆ. ಪ್ರತ್ಯೇಕ ಅರ್ಜಿದಾರರಿಗೆ ತಿಳಿಸಲು ಸಾಧ್ಯವಿಲ್ಲ.

ಮೇಲ್ಕಂಡ ಸಂಘದ ವಾರ್ಷಿಕ ಸಮ್ಮೇಳನವು ಜುಲೈ ತಿಂಗಳು 5ನೇ ತಾರೀಕಿನಲ್ಲಿ 5 ಗಂಟೆಗೆ ಜರಗುವುದರಿಂದ ಸಂಘದ ಬಾಕಿದಾರರೆಲ್ಲಾ ಸಂಘದ ಕಾರ್ಯನಿಮಿತ್ತ ಅನುಸಾರವಾಗಿ ತಮ್ಮ ಸಾಲಿನ ಸುರುಪಾವತಿಯನ್ನು ಕೂಡಲೇ ಸುರುಪಾವತಿ ಮಾಡಬೇಕೆಂದು ಕೇಳಿಕೊಳ್ಳೋಣವಾಗಿದೆ. ವಾರ್ಷಿಕ ವಾರ್ತಿಯಲ್ಲಿ ಸುರುಪಾವತಿ ಮಾಡಿದವರ ವರ್ತ್ತು ಮಾಡದವರ ಹೆಸರನ್ನು ಸೇರಿಸಲಾಗುವುದು.

ಮೇಲ್ಕಂಡ ಸಂಘಕ್ಕೆ ಎಲ್ಲರೂ ಮೆಂಬರುಗಳಾಗಿ ಸಂಘದ ಶ್ರೇಯೋಭಿವೃದ್ಧಿಯನ್ನು ಕಾಪಾಡತಕ್ಕದ್ದು. ವಾರ್ಷಿಕ ಚಂದಾ ಬರೀ ಒಂದು ರೂಪಾಯಿ. ಮಾತ್ರ.

ಸಂಘದಿಂದ ಹೊರಡಿಸಿದ ಸೀಜೆಕ್ಟ್ ಲಾಟ್ರಿಯ ಟಿಕೇಟುಗಳು ಹೆಚ್ಚಾಗಿ ಮಾರಾಟವಾಗದ್ದರಿಂದ ಐದು ಕಕ್ಷಿಗಳ ಬದಲು ಎರಡು ಕಕ್ಷಿಗಳನ್ನು ಮಾತ್ರ ತಾರೀಕು 15—7—1935 ರಲ್ಲು 5 ಗಂಟೆಗೆ ಲಾಟಿ ಹಾಕಲ್ಪಡುತ್ತೆ. ಸಂಘದಿಂದ (Coorg and the Coorgs) ಎಂಬ ಪುಸ್ತಕವನ್ನು ಮತ್ತು ಟಿಕೇಟು ಪುಸ್ತಕಗಳನ್ನು ಹೊಂದಿಕೊಂಡವರು ಅವುಗಳನ್ನು ಆದಷ್ಟು ಮಟ್ಟಿಗೆ ಮಾರಾಟ ಮಾಡಿ ಹಣ ಕಳುಹಿಸಬೇಕಾಗಿ ಕೇಳಿಕೊಳ್ಳೋಣವಾಗಿದೆ.

ವಾರ್ಷಿಕ ಸಮ್ಮೇಳನ ಸಮಯದಲ್ಲು ಸಂಘದ ಕಮಿಟಿ ಮೆಂಬರುಗಳು ಒಂದು ಟೀ ಪಾರ್ಟಿ ಕೊಡಲು ಒಪ್ಪಿರುತ್ತಾರೆ. ಸದರಿ ದಿವಸ ಎಲ್ಲರೂ ಬಂದು ಭಾಗಿಗಳಾಗಬೇಕಾಗಿ ಕೇಳಿಕೊಳ್ಳೋಣವಾಗಿದೆ.

ಕೆ. ಯಂ. ಬೆಳ್ಯಪ್ಪ,
ಗೌರವ ಕಾರ್ಯದರ್ಶಿ.

ಡಾಕ್ಟರ್ ಮೋತ್ಯಾಸ್ ಎಬ್ರಹಾಮರ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಸಕಲ್ಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವದಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಾ ತಿಳಿಯುವುದು. [6—39

ಕೊಡಗು.

ಸನ್ ೧೯೫೫ನೇ ಇಸವಿ

ಜೂನ್ ತಾ ೧೪ನೇ ಶುಕ್ರವಾರ.

ವ್ಯವಸಾಯ ಮತ್ತು ಕೈಗಾರಿಕೆಗಳ ತರಬೇತು.

ನಿರುದ್ಯೋಗಶನದ ಕಾಲವಿದು. ಇಂದು ನಿರುದ್ಯೋಗತನದ ಭೂತವು ದೇಶದಲ್ಲೆಲ್ಲಾ ನಿರ್ಭೀತಿಯಿಂದ ನುತ್ತಾಡುತ್ತಿದೆ. ಇದನ್ನು ಎದುರಿಸುವ ಸಮಸ್ಯೆಯು ಈಗ ಬಹು ಕಠಿಣತರದ್ದಾಗಿ ಪರಿಣಮಿಸಿದೆ. ಪ್ರಪಂಚದ ಹಲವು ದೇಶಗಳ ಸ್ವಾತಂತ್ರ್ಯ ಸರ್ಕಾರಗಳು ಈ ಪ್ರಶ್ನೆಯನ್ನು ಬಿಡಿಸಲು ಬಹುತರವಾಗಿ ಪ್ರಯತ್ನಿಸುತ್ತಿರುವವು. ಆದರೆ ಇನ್ನೂ ಸಫಲವಾಗಿರುವುದಿಲ್ಲ. ಗುಲಾಮಗಿರಿಯಲ್ಲಿ ನರಳುತ್ತಿರುವ ಹಿಂದೂ ಸ್ಥಾನದಲ್ಲಾದರೋ ಸರ್ಕಾರದವರು ಈ ಸಮಸ್ಯೆಗೆ ಗಮನ ಕೊಟ್ಟಂತೆಯೇ ಕಾಣುವುದಿಲ್ಲ. ಅಜಮೂಯಿಸಿ ಇದರ ಪರಿಮಾಣವನ್ನು ತಿಳಿದುಕೊಂಡಿದ್ದೇ ಆದರೆ ಅದರ ನಿವಾರಣೆ ಬಗ್ಗೆ ನಿಗವಿಡಬೇಕಾಗುವದೆಂದು ಸರ್ಕಾರದವರು ಈ ವಿಷಯದಲ್ಲಿ ಉದಾಸೀನರಾಗಿರುವರೋ ಏನೋ? ಪಶ್ಚಿಮ ದೇಶಗಳಲ್ಲಿ ಗ್ರಾಮೋಭಿವೃದ್ಧಿಯನ್ನು ಬಿಟ್ಟು, ಗ್ರಾಮೋತ್ತರಗಳಿಂದ ಜನರನ್ನು ಪಟ್ಟಣಗಳಿಗೆ ಸೆಳೆದು ದೊಡ್ಡ ಕಾರ್ಖಾನೆಗಳನ್ನಿಟ್ಟು, ಗ್ರಾಮಗಳಲ್ಲಿ ಜನರು ಮಾಡುತ್ತಿದ್ದ ಮನೆ ಕೈಗಾರಿಕೆಗಳನ್ನೂ, ವ್ಯವಸಾಯವನ್ನೂ ಮೂಲೆಗೊತ್ತಿದ್ದೇ ಈ ನಿರುದ್ಯೋಗತನಕ್ಕೆ ಮುಖ್ಯ ಕಾರಣವೆಂದು ಹಲವರು ಈಗೀಗ ಒಪ್ಪಿಕೊಳ್ಳುತ್ತಿರುವರು. ಹಿಂದೂಸ್ಥಾನಕ್ಕೂ ಕಾರ್ಖಾನೆಗಳ ಮೇಲಾಟದ ಜಾಡ್ಯವು ಇತ್ತೀಚೆಗೆ ಹರಡುತ್ತಾ ಬಂದು ಗ್ರಾಮಗಳ ಸ್ಥಿತಿಯು ಬಹು ಹೀನವಾಗುತ್ತಿದೆ. ಇದರ ನಿವಾರಣೆಗಾಗಿಯೇ ಮಹಾತ್ಮ ಗಾಂಧಿಯವರು ಗ್ರಾಮೋದ್ಯೋಗ ಸಂಘವನ್ನೂ, ನೂಲುವವರ ಸಂಘವನ್ನೂ ಸ್ಥಾಪಿಸಿರುವದಾಗಿದೆ. ಈ ಸಂಘಗಳ ಕಾರ್ಯಕಲಾಪಗಳು ಎಲ್ಲಾ ಗ್ರಾಮಗಳಿಗೂ ಹರಡುವಂತೆ ಮಾಡುವುದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯವಾಗಿದೆ.

ಹಿಂದೂದೇಶದಲ್ಲಿ ನಿರುದ್ಯೋಗತನಕ್ಕೆ ಇನ್ನೊಂದು ಮುಖ್ಯ ಕಾರಣವಿದೆ. ಸ್ವಾತಂತ್ರ್ಯ ಜೀವನಕ್ಕೆ ಅಯೋಗ್ಯವಾದ ಈಗಿನ ವಿದ್ಯಾಭ್ಯಾಸ ಕ್ರಮವೇ ಈ ಕಾರಣವಾಗಿದೆ. ಬ್ರಿಟಿಷರು ಇಂಡಿಯಾವನ್ನು ಆಳಲು ತೊಡಗಿದಾಗ್ಯೆ ಅವರಿಗೆ ಬಹಳ ಗುಮಾಸ್ತರುಗಳ ಅವಶ್ಯಕತೆ ಇತ್ತು. ಆದುದರಿಂದ ಗುಮಾಸ್ತರುಗಳನ್ನು ತಯಾರು ಮಾಡುವಂಥ ವಿದ್ಯಾಭ್ಯಾಸವನ್ನೇ ಜನತೆಗೆ ತಂದರು. ಆ ಅವಶ್ಯಕತೆಯು ತೀರಿಹೋಗಿರುವದಾದರೂ ಸರ್ಕಾರದವರು ತಾವು ಪ್ರಾರಂಭಿಸಿದ ವಿದ್ಯಾಭ್ಯಾಸ ಕ್ರಮವನ್ನು ದೇಶದ ಅವಶ್ಯಕತೆಗೆ ಸಂಯೋಗಿ ಬದಲಾಯಿಸದೆ ಇರುವದು ಶೋಚನೀಯವಾದ ಅನ್ಯಾಯವಾಗಿದೆ ಉಚ್ಚ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಯುವಕ ಯುವತಿಯರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಇರುವಂತೆ ಸರ್ಕಾರಿ ಉದ್ಯೋಗಗಳ ಸಂಖ್ಯೆಯನ್ನು ಹೆಚ್ಚಿಸಲು ಸಾಧ್ಯವಿಲ್ಲವಾದ ಕಾರಣ ಬೇರೆ ಯಾವ ಕಸಬಿಗೂ ಯೋಗ್ಯರಿಲ್ಲದ ಯುನಿವರ್ಸಿಟಿಗ್ರಿ ಪಡೆದವರನೇಕರು ಈಗ ಬೀದಿಗಳಲ್ಲಿ ಅಲೆದಾಡುತ್ತಿರುವರು. ಈ ಪರಿಸ್ಥಿತಿಯು ಮಿತಿಮೀರಿ ಹೋಗುವ ಮುಂಚೆ ಇದನ್ನು ಪರಿಹರಿಸುವ ಬಗೆ ಕಂಡುಹಿಡಿಯುವುದು ಅಗತ್ಯವಾದೆ. ದೇಶ, ಕಾಲಗಳ ಅವಶ್ಯಕತೆಗೆ ಸರಿಯೂದ ವಿದ್ಯಾಭ್ಯಾಸವನ್ನು ಕೊಡುವುದು ಈ ಸಮಸ್ಯೆಯನ್ನು ಬಿಡಿಸಲು ಮತ್ತೊಂದು ದಾರಿ.

ಹಿಂದೂದೇಶವು ಬೇರೆ ಭಾಗಗಳಿಗಿಂತಲೂ ಹೆಚ್ಚಾಗಿ ಕೊಡಗು ಗ್ರಾಮಗಳ ಮತ್ತು ವ್ಯವಸಾಯಗಾರರ ಪ್ರಾಂತ್ಯವಾಗಿದೆ ಆದರೂ ಕೂಡ ವ್ಯವಸಾಯ ಮತ್ತು ಕೈಗಾರಿಕೆ ಇಲ್ಲಿ ಇಲ್ಲ. ಇದೇ ಪ್ರಾಂತ್ಯಕ್ಕಾಗಿ ಶನಿವಾರಸಂತೆಯಲ್ಲಿ ಒಂದು ನೇಯಿಗೆಯ ಶಾಲೆಯೂ ಮತ್ತು ವೀರಾಜಪೇಟೆಯಲ್ಲಿ ಒಂದು ಬಡಗಿ ಶಾಲೆಯೂ ಮಾತ್ರ ಇವೆ. ಇವುಗಳಿಗೆ ಸರ್ಕಾರದಿಂದ ಸಾಕಷ್ಟು ಉತ್ತೇಜನವಿಲ್ಲವೆಂದರೆ ತಪ್ಪಾಗಲಾರದು. ಉದಾಹರಣೆಗಾಗಿ, ವೀರಾಜಪೇಟೆಯಲ್ಲಿರುವ ಬಡಿಗಿ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಗೆ ತಿಂಗಳಿಗೆ 5 ರೂಪಾಯಿಯಂತೆ (ಸ್ಟೈಪೆಂಡ್) ವೇತನಕೊಟ್ಟು ಎರಡು ವರ್ಷಗಳ ವರೆಗೆ ತರಬೇತುಮಾಡಿಸುತ್ತಾರೆ. ನಂತರ ಅವನು ಶಾಲೆ ಬಿಟ್ಟು ಸ್ವತಂತ್ರ ಜೀವನ ನಡಿಸಬೇಕಾಗಿದೆ. ತಂದೆಯು ಬಡಿಗಿಯೂಗಿದ್ದರೂ ಕೂಡ ಅವನ ಮಕ್ಕಳು ಮರಗೆಲಸ ಚೆನ್ನಾಗಿ ಕಲಿಯಬೇಕಾದರೆ ಅವನೊಂದಿಗೆ ಎಂಟತ್ತು ವರ್ಷಗಳ ವರೆಗೆ ಕೆಲಸಮಾಡಿ ಅಭ್ಯಾಸ ಮಾಡಬೇಕು. ಇದನ್ನರಿತೇ ಇಂಡಿಯಾದ ಇತರ ಕಡೆಗಳಲ್ಲಿಯೂ, ಪರದೇಶಗಳಲ್ಲಿಯೂ ವಿದ್ಯಾರ್ಥಿಗಳು ಎಡೆಬಿಡದೆ ಕಲಿಯುತ್ತಾ ಬಂದರೆ ಏಳು ಅಥವಾ ಏದು ವರ್ಷಗಳಾದರೂ ಮರಗೆಲಸದಲ್ಲಿ ತರಬೇತು ಹೊಂದಬೇಕೆಂದು ನಿಶ್ಚಯಿಸಿರುವುದಾಗಿದೆ. ಆದರೆ ಕೊಡಗಿನಲ್ಲಿ ಮಾತ್ರ ಎರಡು ವರ್ಷಗಳಲ್ಲಿ ಈ ತರಬೇತನ್ನು ಮುಗಿಸಬೇಕೆಂದು ನಿರಮ ಮಾಡಿರುವುದು ಆಶ್ಚರ್ಯವಾಗಿದೆ.

ಅದರಲ್ಲೂ ಕೊಡಗಿಗೆ ಮರಗೆಲಸದವರು ಹೆಚ್ಚಾಗಿ ಹೊರಪ್ರಾಂತ್ಯಗಳಿಂದ ಬರುವುದರಿಂದ ಇಲ್ಲಿಯ ನಿವಾಸಿಗಳಿಗೆ ಒಡಗಿ ಕೆಲಸದ ವಾಸನೆಯೇ ಇಲ್ಲ. ಹೀಗಿರುವಲ್ಲಿ ಬರೇ ಎರಡು ವರ್ಷಗಳ ತರಬೇತು ಹೊಂದಿದ ಯುವಕನು ಒಂದು ಮನೆಯ ಅಥವಾ ದೊಡ್ಡ ಕಟ್ಟಡದ ಕೆಲಸವನ್ನು ಹೇಗೆ ತಾನೇ ಮಾಡಬಲ್ಲನು? ಹಾಗೆ ಅವನು ಮಾಡಲಾರದವನಾದ ಕಾರಣ ಬಡಗಿ ಶಾಲೆಯಿಂದ ಹೆಚ್ಚಿನ ಪ್ರಯೋಜನವಾಗಿರುವುದಿಲ್ಲವೆಂದು ಕೆಲವರು ಅಭಿಪ್ರಾಯಪಟ್ಟಿರುವರಂತೆ. ಇದು ಪೂರ್ತಿ ತಪ್ಪು ಅಭಿಪ್ರಾಯವಾಗಿದೆ. ಬೇರೆ ಕಡೆಗಳಲ್ಲಿ ಜಾರಿಯಲ್ಲಿರುವಂತೆ ಇಲ್ಲಿಯೂ ಐದು ವರ್ಷಗಳ ತರಬೇತು ಕೊಟ್ಟರೆ ಖಂಡಿತವಾಗಿಯೂ ನಮ್ಮ ಪ್ರಾಂತ್ಯದ ಯುವಕರು ಈ ಕಸಬನ್ನು ಚೆನ್ನಾಗಿ ನಡಿಸಬಲ್ಲವರಾಗುವರು; ಅಲ್ಲದೆ ಅವರು ತಮ್ಮ ತರಬೇತನ್ನು ಮುಗ್ತಿಸುವ ಮುಂಚೆಯೇ ಮೂರಾಟದ ಬೆಂಚು, ಕುರ್ಚಿ ಮುಂತಾದ ಚಿಲ್ಲರೆ ಸಾಮಾನುಗಳನ್ನು ಮಾಡಿ ಶಾಲೆಯ ಹಾಗೂ ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಶಕ್ತರಾಗುವರು. ವಿದ್ಯಾರ್ಥಿಗಳು ಶಾಲೆಯಲ್ಲಿ ಮಾಡಿದ ಸಾಮಾನುಗಳ ಮೂರಾಟದ ಉತ್ಪತ್ತಿಯಲ್ಲಿ ಅರ್ಧ ಶಾಲೆಗೂ, ಉಳಿದ ಅರ್ಧ ಮಾಡಿದ ವಿದ್ಯಾರ್ಥಿಗೂ ದೊರಕುವಂತೆ ಮಾಡುವುದು ಉತ್ತಮ. ಆದುದರಿಂದ ಅಧಿಕಾರಿಗಳು ಈ ಶಾಲೆಯಲ್ಲಿ ತರಬೇತಿನ ಕಾಲವನ್ನು 2 ರಿಂದ 5 ವರ್ಷಗಳ ವರೆಗೆ ಹೆಚ್ಚಿಸಿ ಈ ಕೈಗಾರಿಕೆಯ ಶಾಲೆಗೆ ಪ್ರೋತ್ಸಾಹವನ್ನೀಯುವುದು ಅಗತ್ಯವಾಗಿದೆ.

ಸರ್ಕಾರದವರು ಬೇಕೆಂತಲೋ, ಅಥವಾ ದೇಶೀಯರ ಕೋರಿಕೆಗೆ ಸುಲಭದಲ್ಲಿ ಬೆಲೆ ಕೊಡಬಾರದೆಂತಲೋ ಅಗತ್ಯವಿರುವ ಕಾರ್ಯಗಳಿಗೆ ತಡವಾಗಿ ಕೈಹಚ್ಚುತ್ತಾರೆ. ಹೈಸ್ಕೂಲು ವಿದ್ಯಾಭ್ಯಾಸದಲ್ಲಿ ವ್ಯವಸಾಯ ಕ್ರಮದ ತರಬೇತನ್ನೂ ಸೇರಿಸಿಕೊಳ್ಳಬೇಕೆಂದು ಎಷ್ಟೋ ಮೊದಲು ಜನರು ಕೇಳಿಕೊಂಡರು. ಅದನ್ನು ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದರು. ಸುಧಾರಿಸಿದ ವ್ಯವಸಾಯ ಕ್ರಮಗಳನ್ನು ಅನುಸರಿಸದಿರುವುದು, ಇತರ ಕಾರಣಗಳಿಂದಲೂ ರೈತನ ಉತ್ಪತ್ತಿಯು ಬಹು ಮಟ್ಟಿಗೆ ಇಳಿದು ಹೋಗಿ ಅವನು ಸರ್ಕಾರಕ್ಕೆ ಕೊಂದಾಯವನ್ನೇ ಕೊಡಲಾರದಷ್ಟು ಅಧೋಗತಿಗೆ ಇಳಿದಿರುವಾಗ್ಯೆ ಸರ್ಕಾರದವರು ಕಣ್ಣು ತೆರೆದಂತೆ ತೋರುತ್ತದೆ. ಇನ್ನು ಮುಂದೆ ವೀರಾಜಪೇಟೆ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ವ್ಯವಸಾಯ ಕ್ರಮವನ್ನು ಬೋಧಿಸುವ ಏರ್ಪಾಡು ಮಾಡಿರುವರೆಂದು ತಿಳಿಯಬರುತ್ತದೆ. ಇದನೇ ಪ್ರಕಾರವಿನಿಂದ ವಿದ್ಯಾರ್ಥಿಗಳು ವ್ಯವಸಾಯ ಕ್ರಮವನ್ನು 'ಆಪ್ಶನಲ್ ಸಬ್ಜೆಕ್ಟ್' ಇಚ್ಛಿಕ ವಿಷಯವಾಗಿ ತೆಗೆದುಕೊಳ್ಳಬಹುದೆಂದೂ, ಇದರ ತರಬೇತಿಗಾಗಿ ಶಾಲೆಯ ಬಳಿ ಭೂಮಿಯನ್ನು ಏರ್ಪಡಿಸಿರುವದೆಂದೂ, ಇಷ್ಟರಲ್ಲಿ ಎರಡು ವರ್ಷಗಳ ತರಬೇತಾದ ಮೇಲೆ ಸ್ಕೂಲ್ ಫೈನಲ್ ಪರೀಕ್ಷೆಯೊಂದಿಗೆ ಪರೀಕ್ಷೆಯನ್ನು ಕೊಡಬೇಕೆಂದೂ ತಿಳಿಯುತ್ತೇವೆ. ಇದೂ ಅಲ್ಲದೆ ಈ ತರಬೇತಿಗಾಗಿಯೇ ಬರುವ ಯುವಕರಿಗೆ ಮೂಹೆಯೂನ 5 ರೂಪಾಯಿಯ ವೇತನ ಕೊಡುವ ಏರ್ಪಾಡು ಮಾಡಲಾಗುವದೆಂದೂ ವರ್ತಮಾನವಿದೆ. ಇದು ಅಗತ್ಯವಾಗಿಯೂ ಮಾಡಬೇಕಾದ ಕಾರ್ಯವಾಗಿದೆ. ತಡವಾಗಿಯಾದರೂ ಈ ಏರ್ಪಾಡನ್ನು ಮಾಡಿದಕ್ಕೆ ಅಧಿಕಾರಿಗಳನ್ನು ಮೆಚ್ಚಬೇಕಾಗಿದೆ

ಆದರೆ ವ್ಯವಸಾಯ ತರಬೇತಿನ ವಿದ್ಯಾರ್ಥಿಗಳಿಗೆ ವೇತನ ಕೊಡಲು ಬಡಗಿ ಶಾಲೆಯ ವಿದ್ಯಾರ್ಥಿಗಳ ವೇತನದ ಹಣವನ್ನು ಉಪಯೋಗಿಸುವ ಆಲೋಚನೆ ನಡೆಯುತ್ತಿದೆಯೆಂಬಿಯೂ ಸುದ್ದಿ ಇದೆ. ಮೇಲೆ ಹೇಳಿದಂತೆ ಬಡಗಿ ಶಾಲೆಯಿಂದ ಹೆಚ್ಚಿನ ಪ್ರಯೋಜನವಾಗಿಲ್ಲವೆಂದು ಕೆಲವರು ಗ್ರಹಿಸಿಕೊಂಡು ಆ ಶಾಲೆಯನ್ನು ಮುಚ್ಚಿ, ಅದರ ಬದಲು ವ್ಯವಸಾಯ ಬೋಧನೆಗೆ ಅನುಕೂಲ ಮಾಡಬೇಕೆಂದು ಕೆಲವರ ಸೂಚನೆಯಂತೆ. ಇದು ನಿಜವಾದರೆ, ಇದರಿಂದ ಹೆಚ್ಚಿನ ಪ್ರಯೋಜನವೇನೂ ಆಗಲಾರದು. ದೇಶಾಭಿವೃದ್ಧಿಗೆ ಅವಶ್ಯವಾದ ಇನ್ನೊಂದು ವಿಧದಲ್ಲಿ ಕೊಡುವ ರಿಯೊಯಿತಿಯಲ್ಲಿ ಈಗ ಜನರಿಗೆ ಬೇಕಾದದ್ದು ಉಪಯೋಕ್ತವಾದ ಆ ಸಂಸ್ಥೆಯನ್ನು ಬಲಪಡಿಸಿ, ಅದರೊಂದಿಗೆ ಸ್ವಯೋಜನಕರವಾದ ಬೇರೆ ಸಂಸ್ಥೆಗಳನ್ನೂ ಏರ್ಪಡಿಸಬೇಕೆಂಬುದೇ ಜನರ ಕೋರಿಕೆ. ಆದಕಾರಣ ಸರ್ಕಾರದವರು ಬಡಗಿ ಶಾಲೆಯಿಂದ ಮೆತ್ತಷ್ಟೂ ಸ್ವಯೋಜನವಾಗುವಂತೆ ಅಲ್ಲಿಯ ತರಬೇತಿನ ಕಾಲವನ್ನು 5 ವರ್ಷಗಳಿಗೆ ಹೆಚ್ಚಿಸಿ, ವ್ಯವಸಾಯ ಕ್ರಮ ತರಬೇತಿನ ವಿದ್ಯಾರ್ಥಿಗಳಿಗೆ ವೇತನಕ್ಕಾಗಿ ಪ್ರತ್ಯೇಕ ಹಣ ಕೊಡಬೇಕಾಗಿದ್ದೆ. ಸ್ಥಳೀಯ ಸರ್ಕಾರದಲ್ಲಿ ತತ್ಕಾಲ ಇದಕ್ಕೆ ಸಾಕಷ್ಟು ಹಣವಿಲ್ಲವೆಂದಾದರೆ ಗ್ರಾಮೋಭಿವೃದ್ಧಿಗಾಗಿ ಇಂಡಿಯಾ ಸರ್ಕಾರದವರು ಕೊಡುವ ಹಣದಲ್ಲಿ ಸ್ವಲ್ಪವನ್ನು ಇದಕ್ಕೆ ವ್ಯಯಿಸಲು ಯೋಗಿಸಬಹುದಲ್ಲವೇ.

ಬಲುಚಿಸ್ಥಾನ ಭೂಕಂಪ ನಿಧಿ:

ಕಳೆದ ತಾ. 29 ರಲ್ಲಿ ಬಲುಚಿಸ್ಥಾನದಲ್ಲಿ ಉಂಟಾದ ಭಯಂಕರ ಭೂಕಂಪದ ಅನಾಹುತಕ್ಕೆ ಸಿಕ್ಕಿ ಬಿದ್ದ ನಿರಾಶ್ರಿತರ ಸಹಾಯಕ್ಕಾಗಿ ಈ ಕೆಳಗಿನ ಮಹನೀಯರು ಧನ ಸಹಾಯ ಮಾಡಿರುವರು.

			ರೂ.	ಆ.	ಪೈ.
1	ಮ. ರಾ. ಡಾ	ಪಾಂಡಂಡ ಸೋಮಪ್ಪನವರು	5	0	0
2	,,	ಡಾ. ಚೇರಂಡ ಸೋಮಯ್ಯ ,,	5	0	0
3	,,	ಕ್ಯಾಪ್ಟನ್ ಚೆಪ್ಪುಡಿರ ಪೊನ್ನಪ್ಪ ,,	5	0	0
4	,,	ಡಾ ಕೊಂಗೆಟ್ಟಿರ ಮಂದಣ್ಣ ,,	5	0	0
5	,,	ಸಿ. ಯನ್. ವೆಂಕಪ್ಪಯ್ಯ ,,	3	0	0
6	,,	ಪಂದ್ಯಂಡ ಬೆಳ್ಯಪ್ಪ ,,	3	0	0
7	,,	ಪಾಂಡಂಡ ಚಂಗಪ್ಪ ,,	2	0	0
8	ಮೆಸರ್ಸ್	ಕುರ್ಗ್ ಸ್ಪೋರ್ಟ್ಸ್ ,,	2	0	0
9	ಮ. ರಾ.	ಕೆ ಯನ್. ಸುಬ್ರಾಯ ,,	1	0	0
10	,,	ಮನೆಯಪಂಡ ಬೆಳ್ಯಪ್ಪ ,,	1	0	0
11	,,	ಐನಂಡ ಕಾರ್ಯಪ್ಪ ,,	1	0	0
12	,,	ಪುಟ್ಟಿಚಂಡ ಮಂದಪ್ಪ ,,	1	0	0
13	,,	ಪಳಂಗಂಡ ಅಪ್ಪಯ್ಯ ,,	1	0	0
14	,,	ಬಲ್ಲಚಂಡ ಯಸ್. ಚಂಗಪ್ಪ ,,	1	0	0
15	,,	ಪಟ್ಟಪಂಡ ಮೊಣಪ್ಪ ,,	1	0	0
16	,,	ಮಂಡೇಪಂಡ ಸೋಮಯ್ಯ ,,	1	0	0
17		,, ನಂಜಪ್ಪ ,,	1	0	0
18	,,	ಪುತ್ತಮನೆ ಮುದ್ದಯ್ಯ ,,	1	0	0
19	,,	ಪಾರ್ವಂಗಡ ಚಂಗಪ್ಪ ,,	1	0	0
20	,,	ಅಂಜಪರವಂಡ ಮುತ್ತಪ್ಪ ,,	1	0	0
21	,, ಡಾ.	ನಡಿಕೇರಿಯಂಡ ಜಿ. ಸುಬ್ಬಯ್ಯ ,,	1	0	0
22	,,	ಕೊಕ್ಕೇಂಗಡ ಮೊಣಪ್ಪ ,,	1	0	0
23	,,	ಮದನಮೋಹನ್ ಸಿಂಗ್ ,,	1	0	0
24	,	ಮೇಕೇರಿರ ಯಸ್. ಮೊದಪ್ಪ ,,	1	0	0
25	,	ಯಸ್. ರಾಮಲಾಲ್ ,,	1	0	0
26	,,	ಪುಟ್ಟಿಚಂಡ ಅಚ್ಚಯ್ಯ ,,	1	0	0
27	,,	ಚೆಪ್ಪುಡಿರ ಪೂಣಚ್ಚ ,,	1	0	0
28	,,	ಕೊಂಗೆಟ್ಟಿರ ಅಪ್ಪಯ್ಯ ,,	1	0	0
29	,,	ಬಳಕರಂಡ ಕಾರ್ಯಪ್ಪ ,,	1	0	0
30	,,	ಬಲ್ಯಂಡ ಪೂವಯ್ಯ ,,	0	8	0
31	,,	ಪೊನ್ನಚಂಡ ಮುದ್ದಪ್ಪ ,,	0	8	0
32	,,	ಉದಿಯಂಡ ಮಾಚಯ್ಯ ,,	0	8	0
33	,,	ಜಿ. ಎನ್. ರಾಮಚಂದ್ರರಾವ್ ,,	0	8	0
34	,,	ಮಂಡೆಮಡ ಬೋಪಯ್ಯ ,,	0	8	0
35	,,	ಮನೆಯಪಂಡ ಎ. ಗಣಪತಿ ,,	0	8	0
36	,,	ಜೆ. ಡಿಸೋಜ ,,	0	8	0
37	,,	ಬೈರೆಟ್ಟಿರ ಚಂಗಪ್ಪ ,,	0	8	0
38	,,	ಜಿ ಐ ಮೊದಮಯ್ಯ ,,	0	8	0
39	,,	ಮುಂಡಮಾಡ ದೇವಯ್ಯ ,,	0	8	0
40	,,	ಕೀಕಿರ ಅಂಣಯ್ಯ ,,	0	8	0
41	,	ಅಜ್ಜಮಾಡ ಮೊದಪ್ಪ ,,	0	8	0
42	,,	ಕಾಡ್ಯಮಾಡ ಅಪ್ಪಣ ,,	0	8	0
43	,	ಎ ಸಿ. ಸುಬ್ಬಮ್ಮಯ್ಯ ,,	0	8	0
44	,,	ಮುಂಡಂಡ ಬಿದ್ದಪ್ಪ ,,	0	8	0
45	,	ಅಪ್ಪಂಡೆರಂಡ ಅಪ್ಪಚ್ಚ ,,	0	8	0
46	,,	ತಿಮೋಥಿ ಕುಂದರ್ ,,	0	8	0
		ಜುಮ್ಲ.	59	8	0

ಈ ಮೊಬಲಗನ್ನು ಸಿಂಧ್ ಕಾಂಗ್ರೆಸ್ ಕಮಿಟಿಯವರು ಏರ್ಪಡಿಸಿರುವ ನಿರಾಶ್ರಿತರ ಸಹಾಯ ನಿಧಿಗೆ ಕಳುಹಿಸುವ ಏರ್ಪಾಡು ಮಾಡಲಾಗಿದೆ. ಈ ಬಗ್ಗೆ ನನಗೆ ಕಳುಹಿಸುವ ಚಂದಾ ಮೊಬಲಗನ್ನು ವಂದನಾಪೂರ್ವಕ ಸ್ವೀಕರಿಸಲಾಗುವುದು.

ಪಿ. ಐ. ಬೆಳಪ್ಪ.

ವರ್ತಮಾನ ಸಂಗ್ರಹ.

ಒಳದೇಶ.

ಬೆಪ್ಪುನಾಡು ಅಲಮೇರಿ ಗ್ರಾಮದ ಮ. ರಾ. ಕಂಡ, ಕಂಡ ಪೂನಯ್ಯನವರು ಈ ತಾ. 10 ರಲ್ಲಿ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಕೊಡಗು ವಿದ್ಯಾಭಿವೃದ್ಧಿ ಸಂಘದ ವಾರ್ಷಿಕ ಜನರಲ್ ಮಿಟಿಂಗು ಭರುವ ಜುಲೈ ತಾ. 5ರಲ್ಲಿ ಮಡಿಕೇರಿಯಲ್ಲಿ ನಡೆಯುವುದೆಂದು ತಿಳಿಯುತ್ತೇವೆ.

ಕೊಡಗು ಸೆಂಟ್ರಲ್ ಬ್ಯಾಂಕಿನ ಸಾಲನಿವಾರಣೆ ಬೋರ್ಡಿನವರ ಎಂಟಿಂಗೊಂದು ಈ ತಾ. 18ನೇ ಮಂಗಳವಾರ ಬೆಪ್ಪುನಾಡು ಕುಂಜಿಲಗೇರಿ ಗ್ರಾಮದಲ್ಲಿ ನಡೆಯುವುದಾಗಿ ತಿಳಿಯಬರುತ್ತದೆ.

ಮ. ರಾ. ಬಿ. ಟಿ. ಗೋವಿಂದಯ್ಯನವರು ಬೊಂಬಾಯಿ ಯುನಿವರ್ಸಿಟಿಯ ಎಲ್ ಎಲ್. ಬಿ. (ಆನ) ಕೋರ್ಸಿನ ಪ್ರಥಮ ವರ್ಷದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಸಲು ಹರುಷಿತರಾಗಿದ್ದೇವೆ.

ದೇಶದಲ್ಲಿ ಇಷ್ಟರ ವರೆಗೆ ಮಳೆ ಇಲ್ಲದ ಕಾರಣ ಕುಡಿಯಲಿಕ್ಕೂ, ವ್ಯವಸಾಯಕ್ಕೂ ನೀರಿಲ್ಲದೆ ಜನರು ಕಷ್ಟಪಡುತ್ತಿದ್ದರು. ಆದರೆ ತಾ. 13 ರಿಂದ ಮಳೆಯು ಎಲ್ಲಾ ಕಡೆ ಪ್ರಾರಂಭವಾಗಿದೆಯೆಂದು ತಿಳಿಯಬರುತ್ತದೆ

ಕ್ವೆಟ್ಟಾ ಭೂಕಂಪದ ನಿಧಿಗೆ ಧನ ಸಹಾಯ ಪಡೆಯಲಿಕ್ಕಾಗಿ ಕೊಡಗು ಕಮಿಷನರವರು ಈ ತಾ. 18ರಲ್ಲಿ ಬೆಳಿಗ್ಗೆ 11 ಗಂಟೆಗೆ ಕೌನ್ಸಿಲು ಹಾಲ್‌ನಲ್ಲಿ ಒಂದು ಪಬ್ಲಿಕ್ ಮಿಟಿಂಗಿನಲ್ಲಿ ಭಾಷಣ ಮಾಡುವರಾಗಿ ಪ್ರಕಟವಾಗಿದೆ.

ಕೊಡಗು ಟೆರಿಟೋರಿಯಲ್ ಪಟಲಾವಿನ ಮ. ರಾ. ಗಳಾದ ಕುಂಬೆರ ಪೊನ್ನಪ್ಪನವರು, ಚೊಟ್ಟಂಗಳ ಅಪ್ಪಣನವರು ಮತ್ತು ಕುಟ್ಟಂಡ ಚಂಗಪ್ಪನವರು ವೈಸರಾಯರ ಕಮಿಷನ್ಡ್ ಅಫೀಸರ್ಸುಗಳಾಗಿ (ಜಮೇದಾರರುಗಳಾಗಿ) ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ

ಕೊಡಗಿನ ಡಿಸ್ಟ್ರಿಕ್ಟ್ ವೇಜಿಸ್ಟ್ರೇಟರಾಗಿರುವ ಮ. ರಾ. ಮಂಡೇಪಂಡ ಮಂದಣ್ಣನವರು ಮತ್ತು ಡೆಪ್ಯುಟಿ ಡೈರೆಕ್ಟರೂ, ಸಹಕಾರಿ ಸಂಘಗಳ ರಿಜಿಸ್ಟ್ರಾರರೂ ಆಗಿರುವ ಮ. ರಾ. ಕರವಂಡ ಚಂಗಪ್ಪನವರು ಅವರವರ ಉದ್ಯೋಗಗಳಲ್ಲಿ ಖಾಯಂ ಮಾಡಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಬೆಂಗಳೂರು ಉರಧ್ಯಾಯರ ಟ್ರೈನಿಂಗ್ ಶಾಲೆಯಲ್ಲಿ ತರಬೇತು ಹೊಂದುತ್ತಿದ್ದ ಮ. ರಾ. ಗಳಾದ ಕುಪ್ಪಂಡ ಮೊದಯ್ಯನವರು, ಕಾಟ್ಟಂಡ ಸುಬ್ಬಯ್ಯನವರು, ಪೋರಯ್ಯನ ದೇವಯ್ಯನವರು ಮತ್ತು ಕರ್ತಚ್ಚಿರ ಅಪ್ಪಚ್ಚನವರು ಟೀಚರ್ಸ್ ಟ್ರೈನಿಂಗ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ. ಇವರಿಗೆ ನಮ್ಮ ಅಭಿವಂದನೆಗಳಿವೆ.

ತಂಕರ್ ವಿಶಲ್ ಸರ್ವಿಸಿನ ಹೊಸ ಬಸ್ಸೊಂದು ಈ ತಾ. 7ರಂದ ಮಡಿಕೇರಿಯಿಂದ ಬೆಳಿಗ್ಗೆ 6.45 ಗಂಟೆಗೆ ಹೊರಟು, ಉಡುಪಿ, ಕುಂದಾಪುರ ಮುಂತಾದ ಸ್ಥಳಗಳಿಗೆ ಹೋಗುವ ಪ್ರಯಾಣಿಕರು ಅದೇ ದಿನ ತಲಪುವಂತೆ ಮಂಗಳೂರಿನಲ್ಲಿ ಅವರ ಸಂಯುಕ್ತ ಸರ್ವಿಸಿನಲ್ಲಿ ಸ್ಥಳಕೊಟ್ಟು, ಮಧ್ಯಾಹ್ನ 1 ಗಂಟೆಗೆ ವಾಪಸು ಹೊರಟು, ಮಡಿಕೇರಿಗೆ ಸಾಯಂಕಾಲ 7 ಗಂಟೆಗೆ ತಲಪುತ್ತದೆಂದು ತಿಳಿಯಬರುತ್ತದೆ.

ಕೊಡಗಿನ ಇಕಾನಾಮಿಕ್ ಎನ್‌ಕ್ವಯರಿ (ಆರ್ಥಿಕ ವಿಚಾರಣಾ) ಕಮಿಟಿಯ ಮೀಟಿಂಗೊಂದು ಕಳೆದ ತಾ. 31ರಲ್ಲಿ ಮಡಿಕೇರಿಯಲ್ಲಿ ನಡೆದು ದೇಶದ, ಕೆಲವು ಮಹನೀಯರಿಂದ ಬರಹ ಮೂಲಕ ಬಂದ ಅಭಿಪ್ರಾಯಗಳನ್ನು ಜೊತೆಗೂಡಿಸಿ, ಜುಲೈ ತಾ. 10ರಂದ ಒಂದು ವಾರದ ವರೆಗೆ ದೇಶದ ಕೆಲವು ಮುಖ್ಯ ಸ್ಥಳಗಳನ್ನು ಸಂದರ್ಶಿಸಿ, ಕೆಲವು ಮಹನೀಯರೊಂದಿಗೆ ಮಿದ್ದು ಮಾತಾಡಿ ಅಭಿಪ್ರಾಯ ತೆಗೆದುಕೊಳ್ಳಲು ನಿಶ್ಚಯಿಸಿರುವುದಾಗಿ ತಿಳಿಯಬರುತ್ತದೆ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ.

ಈ ವರುಷದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಈ ಕೆಳಗೆ ಕಾಣಿಸಿದ ಪ್ರಕಾರ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರು.

ಮಡಿಕೇರಿ ಹೈಸ್ಕೂಲಿನಲ್ಲಿದ್ದ ಒಟ್ಟು 38 ವಿದ್ಯಾರ್ಥಿಗಳ ಪೈಕಿ ಪರೀಕ್ಷೆಗೆ ಕಳುಹಿಸಲ್ಪಟ್ಟಿದ್ದ 29 ಮಂದಿಯಲ್ಲಿ—(1) ಜೊಪ್ಪಿಪೇಟೆ ವಿ ವೆಂಕಟರಮಣಯ್ಯನವರು, (2) ಚಿಮ್ಮಂಡ ಪಿ ಕುಶಾಲಪ್ಪನವರು, (3) ಮೂಳೇರಿರ ಎ ಅಪ್ಪಚ್ಚನವರು, (4) ತೆಕ್ಕಡ ವಿ. ಕೃಷ್ಣಪ್ಪನವರು, (5) ನಡಿಕೇರಿಯಂಡ ಎನ ಕುಶಾಲಪ್ಪನವರು, (6) ಕುತ್ತಿಮನೆ ಪಂಮೇಶ್ವರನವರು, (7) (8) ನೆಲ್ಲಮಂಡ ಎನ್. ಅಪ್ಪಯ್ಯನವರು, (9) ಅಜ್ಜನಮಡ ಭವಿಷ್ಯಪ್ಪನವರು, (10) ಕೋದಂಡ ಪಿ. ಗಣಪತಿಯವರ, (11) ಸಾಲೆಕಲ್ಲು ಶಂಕರನಾರಾಯಣನವರು, (12) ಪಟ್ಟಮಾಡ ಯಂ. ಸಂಜುಂಡನವರು, (13) ಹೆಚ್. ಎಸ್. ಸುಬ್ರಾಯನವರು, (14) ನಂದಿನೆರವಂಡ ತಿಮ್ಮಯ್ಯನವರು, ರಾಮನವರು, ಮತ್ತು (15) ಬಿ. ಪಿ. ಪೂವಯ್ಯನವರು (ಕನಿಶ್ಠ ಫಲ) ಪಾಸಾಗಿರುವರು. ಇಪ್ಪರ ಸರ್ಟಿಫಿಕೇಟ್ ಪುಸ್ತಕಗಳು ಇನ್ನೂ ಬಂದಿಯಿವುದಿಲ್ಲ.

ವೀರಾಜಪೇಟೆ ಹೈಸ್ಕೂಲಿನಲ್ಲಿದ್ದ 31 ವಿದ್ಯಾರ್ಥಿಗಳ ಪೈಕಿ ಪರೀಕ್ಷೆಗೆ ಕಳುಹಿಸಲ್ಪಟ್ಟಿದ್ದ 17 ವಿದ್ಯಾರ್ಥಿಗಳಲ್ಲಿ (1) ಮನೆಯಪಂಡ ಡಬ್ಲ್ಯು ಮುದ್ದಯ್ಯನವರು (2) ಜೋಡುಮಾಡ ಎಸ್. ಪೊನ್ನಪ್ಪನವರು, (3) ಅಮ್ಮಣಿಚಂಡ ಬಿಂ. ಬೆಳ್ಯಪ್ಪನವರು, (4) ಮನೆಯಪಂಡ ಡಬ್ಲ್ಯು ಮುತ್ತಣ್ಣನವರು, (5) ಕುಂಬೆರ ಕೆ ಪೂವಯ್ಯನವರು, (6) ಮುಕ್ಕಾಟಿರ ಯಂ. ಚಿಂಗಪ್ಪನವರು, (7) ಬಲ್ಲಚಂಡ ಯಂ. ಕುಟ್ಟಪ್ಪನವರು, (8) ಉದಿಯೊಂಡ ಎ. ದೇವಯ್ಯನವರು, (9) ಬಲ್ಲಚಂಡ ಯಂ. ಕಾಳಯ್ಯಪ್ಪನವರು, (10) ಪೇಲೆರ ಕೆ ಪೂಜಪ್ಪನವರು, (11) ಪುಲಿಯಂಡ ಯಂ. ಚಂಗಪ್ಪನವರು, (12) ಬಲ್ಲಚಂಡ ಟಿ. ಕುಟ್ಟಪ್ಪನವರು, (13) ಪಟ್ಟಡ ಎ. ಬೆಳ್ಯಪ್ಪನವರು, (14) ಜಿಕ್ಕಯಂಟ್ ಪಿ. ಗಂಗಾಧರನವರು ಮತ್ತು ಪೂಜಮಾಡ ಡಿ. ಅಪ್ಪಯ್ಯನವರು ತೇರ್ಗಡೆ ಹೊಂದಿರುವರು. ಒಬ್ಬನ ಸರ್ಟಿಫಿಕೇಟ್ ಪುಸ್ತಕ ಇನ್ನೂ ಬಂದಿರುವುದಿಲ್ಲ.

ಮಡಿಕೇರಿ ಹುಡುಗಿಯರ ಹೈಸ್ಕೂಲಿನಲ್ಲಿನ 8 ವಿದ್ಯಾರ್ಥಿನಿಗಳಲ್ಲಿ ಎಲ್ಲರೂ ಅಂದರೆ (1) ಕಾಂಬುಸಂಡ ಅಕ್ಕಮ್ಮನವರು (2) ಕರ್ತಮಾಡ ಯಂ. ಸುಬ್ಬವ್ವನವರು, (3) ನವಾಜ್ ಡಿ. ಫ್ರಾನ್ಸಿಯವರು (4) ಪಟ್ಟಮಾಡ ಯಂ. ದೇವಮ್ಮನವರು, (5) ಕೊರವಂಡ ಯಂ ಕಾವೇರವ್ವನವರು, (6) ಕೋದಾಂಡ ಡಿ ಪೊನ್ನಮ್ಮನವರು, (7) ಚಿಂಡವಂಡ ಯಂ ಅಕ್ಕಮ್ಮನವರು ಮತ್ತು (8) ಕಲಿಯಂಡ ಯಂ. ಸೀತಮ್ಮನವರು ಉತ್ತೀರ್ಣರಾಗಿರುವರು.

ಇವರ್ನೆಲ್ಲ ಅಭಿವಂದಿಸುತ್ತೇವೆ.

ಹಿಂದೂ ದೇಶ.

ಕ್ವೆಟ್ಟದಲ್ಲಿ ಕಳೆದ ಎರಡನೆಯ ತಾರೀಕಿನಲ್ಲಿಯೂ ಪೆರಡನೆಯ ಬಾರಿಗೆ ಭೂಕಂಪ ಉಂಟಾಗಿ, ಶೇಷವಾಗಿ ಉಳಿದಿದ್ದ ಕೆಲವು ಕಟ್ಟಡಗಳನ್ನೂ ನೆಲಸಮ ಮಾಡಿತು.

ಕಳೆದ ಗುರುವಾರ ಲಕ್ನೋ ನಗರದಲ್ಲಿಯೂ ಅದರ ಆಸ್ಪಕ್ಕದ ಊರುಗಳಲ್ಲಿಯೂ ಉಷ್ಣಾಧಿಕ್ಯದಿಂದ ಒಟ್ಟು 11 ಮರಣಗಳು ಸಂಭವಿಸಿವೆಯೆಂದು ಹೇಳಲಾಗಿದೆ.

ಆಸ್ಟ್ರೇಲಿಯಾ ಸರ್ಕಾರದವರು ಕ್ವೆಟ್ಟಾ ಭೂಕಂಪದಲ್ಲಿ ನಷ್ಟಪಟ್ಟವರ ಸಹಾಯಕ್ಕಾಗಿ ಇಂಡಿಯಾ ಸರ್ಕಾರದವರಿಗೆ ಹತ್ತು ಸಾವಿರ ಪವುಂಡುಗಳನ್ನು ಕಳುಹಿಸಿಕೊಟ್ಟಿರುತ್ತಾರೆ.

ವೂಳೀರಿನಲ್ಲಿ ಒಂಪತ್ತು ಶಿವಾಲಯಗಳನ್ನು ಪೋಲೀಸರು ನೆಲಸಮಮಾಡಿ ಆ ವಿಗ್ರಹವನ್ನು ಗಂಗೆಗೆ ಬಿಸಾಡಿದರೆಂದು ಅಲ್ಲಿನ ವ್ಯಾಪಾರಸ್ಥರೆಲ್ಲ ಹರತಾಳವನ್ನಾಚರಿಸಿದ್ದಾರೆ.

ಲೀಗ್ ಆಫ್ ನೇಶನಿನ ಮುಂದಿನ ಅಧಿವೇಶನದಲ್ಲಿ ಶ್ರೀ. ಬಿ. ಕೆ. ವಸು ಸಿ. ಐ ಇ. ಯವರು ಒಬ್ಬ ಡೆಲಿಗೇಟರು. ಇಂಡಿಯಾ ಸರಕಾರವೇ ಇವರನ್ನು ಆರಿಸಿದೆ.

ಮರಾಠಾ ಪ್ರಾಂತದ ಸಂಚಾರವನ್ನು ಮುಗಿಸಿಕೊಂಡು, ಬಾಬು ರಾಜೇಂದ್ರ ಪ್ರಸಾದರು, ಇದೇ ಜೂನ್ ತಾ. 17 ರಿಂದ 26ರ ವರೆಗೆ ಮಹಾಕೋಸಲ ಪ್ರಾಂತದಲ್ಲಿ ಸಂಚರಿಸುವರು.

ಕ್ವೆಟ್ಟಾ ನಿಧಿಗಾಗಿ ಚಕ್ರವರ್ತಿ ಸಾರ್ವಭೌಮರು 500 ಪವುಂಡುಗಳನ್ನೂ, ಚಕ್ರವರ್ತಿನಿಯವರು 250 ಪವುಂಡುಗಳನ್ನೂ, ಬ್ರಿಟಿಷ್ ಸರ್ಕಾರದವರು 50 ಸಾವಿರ ಪವುಂಡುಗಳನ್ನೂ ದಯಪಾಲಿಸಿರುತ್ತಾರೆ.

ಚಕ್ರವರ್ತಿ ಸಾರ್ವಭೌಮರವರು ಕಳೆದ ಗುರುವಾರ ಬೆಳಿಗ್ಗೆ ತಮ್ಮ ಪ್ರಿವಿ ಕೌನ್ಸಿಲಿನ ಎಂಟಿಂಗನ್ನು ನಡಿಸಿ ಸರ್ ತೇಜ್ ಬಹದ್ದೂರ್ ಸಪ್ರೂರವರನ್ನು ಪ್ರಿವಿ ಕೌನ್ಸಿಲರಾಗಿ ನೇಮಿಸಿದರೆಂದು ಪ್ರಕಟವಾಗಿದೆ.

ಶ್ರೀ ಕಂಚಿಯ ಕಾಮಕೋಟಿ ಮಠದ ಜಗದ್ಗುರು ಶಂಕರಾಚಾರ್ಯರ ಹಲವು ಚಿನ್ನಾಭರಣಗಳು ಕಾಶಿಯಲ್ಲಿ ಕಳುವಾಗಿದೆ. 15 ವಿಗ್ರಹಗಳು, 400 ತೊಲೆಯ ಬೆಳ್ಳಿಯ ಸಾಮಾನುಗಳು, ಮತ್ತೂ 200 ರತ್ನಗಳ ಹಾರಗಳು.

ಚಕ್ರವರ್ತಿ ಸಾರ್ವಭೌಮರವರ ಸಿಲ್ವರ್ ಜ್ಯುಬಿಲಿ ನಿಧಿಗೆ ಹಣ ಒದಗಿಸಿಕೊಟ್ಟಿರುವ ಡಿಸ್ಟ್ರಿಕ್ಟುಗಳಲ್ಲೆಲ್ಲಾ ಕೊಯಮುತ್ತೂರಿನಷ್ಟು ಉದಾರವಾಗಿ ಆ ನಿಧಿಗೆ ಸಹಾಯ ಮಾಡಿರುವ ಡಿಸ್ಟ್ರಿಕ್ಟು ಇಂಡಿಯಾ ದೇಶದಲ್ಲಿ ಮತ್ತೆ ಯಾವುದೂ ಇಲ್ಲವೆಂದು ಹೇಳಲಾಗಿದೆ. ಈ ಡಿಸ್ಟ್ರಿಕ್ಟಿನಲ್ಲಿ ವಸೂಲಾದ ಮೊಬಲಗು 1,25,291 ರೂಪಾಯಿ.

ವೈಸಂಪುರ ಕ್ವೆಟ್ಟಾ ಭೂಕಂಪದ ಫಂಡಿಗೆ ಪಂಗಡಿ—ಬರ್ಮಾ ತೆಲಿ ಕಂಪೆನಿ 1 ಲಕ್ಷ ರೂಪಾಯಿ, ಪೈದರಾಬಾದು ನೈಜಾಮರವರು 15 ಸಾವಿರ ರೂಪಾಯಿ ಪಂಜಾಬಿನ ಗವರ್ನರ್ ರೂ. 1,500; ಮದ್ರಾಸ್ ಗವರ್ನರ್ 2 ಸಾವಿರ. ಈ ಫಂಡಿಗೆ ಈಗ ಮುವತ್ತೂರು 15 ಲಕ್ಷ ರೂಪಾಯಿಗೆ ಏರಿದೆ.

ನಾಗಪುರದ ಎಂಪ್ರೆಸ್ ವಿಲ್ಲಾನಲ್ಲಿ ಕಳೆದ ಕೆಲವು ದಿನಗಳಿಂದ ಮಿಷ್ಯರವು ತಲೆದೋರಿದ ಪರಿಣಾಮವಾಗಿ ಅಡಳಿತದಾರರು ಮಿಲ್ಲಿನ್ನು ಮುಚ್ಚಿದರು. 1700 ಮಂದಿ ಕೆಲಸಗಾರರು ಕೆಲಸವಿಲ್ಲದೆ ತಿರುಗಾಡುವಂತಾಗಿದೆ. 850 ಕೆಲಸಗಾರರು ಮಿಲ್ಲಿನ ಗೇಟಿನೆದುರು ಸತ್ಯಾಗ್ರಹವನ್ನಾಚರಿಸುತ್ತಿದ್ದಾರೆ.

ಮಹಾತ್ಮಾಜಿಯವರು 1934 ರಲ್ಲಿ ತುಳ್ಕುಳಿ ಮುನಿಸಿಪಾಲಿಟಿಯನ್ನು ಸಂದರ್ಶಿಸಿದ್ದಾಗ, ಅದರ ಗೌರವಾರ್ಥವಾಗಿ, ಅಲ್ಲಿನ ಎಲ್ಲ ಶಾಲೆಗಳಿಗೂ ರಜೆ ಕೊಟ್ಟಿದ್ದರು. ಈ ರಜೆ ಸರಕಾರೀ ಕೃಮಗಳಿಗೆ ವಿರೋಧವೆಂದೂ, ಆದುದರಿಂದ ಆ ದಿನದ ಸಂಬಳವನ್ನು ಉಪಾಧ್ಯಾಯರ ಸಂಬಳದಿಂದ ಹಿಡಿಯಬೇಕೆಂದೂ ಸರಕಾರದ ಅಪ್ಪಣೆ.

ಕ್ವೆಟ್ಟಾ ಭೂಕಂಪದ ಸಹಾಯ ನಿಧಿಗೆ ಇಂಡಿಯಾ ಗವರ್ನಮೆಂಟಿನ ಖಜಾನೆಯಿಂದ ಗವರ್ನರ್-ಜನರಲ್‌ರವರು ಹತ್ತು ಲಕ್ಷ ರೂಪಾಯಿ ಸೊಂಕ್ಷನ್ ಮಾಡಿಕೊಟ್ಟಿರುತ್ತಾರೆ. ದಕ್ಷಿಣ ಆಫ್ರಿಕಾ ದೇಶದಲ್ಲಿರುವ ಭಾರತೀಯರು 1,020 ಪವುಂಡುಗಳನ್ನು ಕಳುಹಿಸಿಕೊಟ್ಟಿರುತ್ತಾರೆ

ಜಿಡ್ಡು ಕೃಷ್ಣಮೂರ್ತಿಯವರ ಒಂದು ಭಾಷಣದಲ್ಲಿ ಮಧುರ ಧ್ವನಿಯ ಸಂಗೀತವೊಂದು ಕೇಳಬಹುದಾಗಿದೆ. ಹಾಡುವವರು ಮನುಷ್ಯರಲ್ಲ. ಪಾರ್ಶ್ವ ದೇಶದ ಮರಳಿನ ರಾಶಿ ಈ ರಾತ್ರಿಗೆ ನಕ್ಷತ್ರಗಳ ಮೂಲಕ ವಾಯುವನ್ನು ತಂದು ತುಂಬಿ, ಆ ವಾಯುವಿನ ಸಂಪರ್ಕದಿಂದ ಆ ಮರಳು ಹಾಡುವಂತೆ ಮಾಡುವ ಏರ್ಪಾಡಿದೆ. ಇದಕ್ಕೆ ಅಸ್ಸಥೆಯ ಗಾಯನವೆಂದು ಹೆಸರು!

ಪೋಲೀಸರು ಕಳ್ಳರನ್ನು ಹಿಡಿಯಲು ನೂತನ ವಿಧಾನಗಳನ್ನು ಕಾಣು ಹಿಡಿದು ಉಪಯೋಗಿಸುತ್ತಿರುವಷ್ಟಕ್ಕೆ ಆ ವಿಧಾನಗಳನ್ನು ಮಂಣು ಗೂಡಿಸಲು ಆ ಕಳ್ಳರೂ ಶಾಸ್ತ್ರೀಯ ರೀತಿಗಳನ್ನು ಕಂಡು ಹಿಡಿಯುತ್ತಿರುವರು. ಕಲ್ಕತ್ತೆಯಲ್ಲಿ 3 ಮಂದಿ ಹಳೇ ಅಪರಾಧಿಗಳನ್ನು ಹಿಡಿದಾಗ ಇವರಲ್ಲಿ ವಿದ್ಯುಚ್ಛಕ್ತಿಯ ಉಳಿಗಳೂ, ಇತರ ಯಂತ್ರಗಳೂ, ಅಪರಾಧಗಳ ಗುಟ್ಟನ್ನು ಬಯಲು ಮಾಡುವ ಬೆರಳುಗಳ ಗುರುತನ್ನು ಅಳಸುವ ಕೈಚೀಲಗಳೂ ಸಿಕ್ಕಿದುವು.

ಕ್ವೆಟ್ಟಾ, ಮಸ್ಟಂಗ್ ಮತ್ತು ಕಾಲಟ್ ಈ ಊರುಗಳಲ್ಲಿ ಉಂಟಾದ ಭೂಕಂಪದ ಪೆಪೆಯಿಂದ ಅಲ್ಲಿ ಗೆಂಡಾತರದಿಂದ ಪಾರಾಗಿ ಉಳಿದಿರುವ ಪ್ರಜೆಗಳೆಲ್ಲರೂ ನಿರ್ಗತಿಕರಾಗಿ ಅವರ ಬಳಿಯಲ್ಲಿ ಒಂದು ಕಾಸೂ ಇಲ್ಲದಿರುವ ಕಾರಣ ಅವರು ಇತರ ಊರುಗಳಲ್ಲಿರುವ ತಮ್ಮ ಬಂಧು ಮಿತ್ರಾದಿಗಳಿಗೆ ಕಾಗದ ಬರೆಯಬೇಕಾದಲ್ಲಿ ಸ್ಟ್ಯಾಂಪು ಹಚ್ಚದೆ ಹಾಗೆಯೇ ಕಾಗದಗಳನ್ನು ಪೋಸ್ಟಿಗೆ ಹಾಕಬಹುದೆಂದು ಪೋಸ್ಟ್ ಆಫೀಸಿನವರು ರಿಯಾಯಿತಿ ತೋರಿಸಿರುತ್ತಾರೆ.

ಶಿಕಾರಿಪುರದಲ್ಲಿ ಹುಡುಗಿಯರ ನವೀನ ಪರಿಷ್ಕರಣದ ಉಡುಗೆ ತೊಡಿಗೆಗಳ ವಿರುದ್ಧವಾಗಿ ಪ್ರಬಲವಾದ ಒಂದು ಚಳವಳಿವೆದ್ದಿದೆ. 'ಫ್ಯಾಶನ್' ಮಾಡಿಕೊಂಡು ಹುಡುಗಿಯರು ಅಲ್ಲಿನ ಶಾಲೆಗಳಿಗೆ ಪ್ರವೇಶಿಸಿದಂತೆ ಶಾಲೆಗಳನ್ನು ಪಿಕೆಟ್ ಮಾಡಬೇಕೆಂದು ಆ ಟೌನ್ ಪಂಚಾಯಿತಿಯು ನಿರ್ಧರಿಸಿದೆ. ಖತ್ ದರ್ಬಾರಿನ ಸಂಪ್ರದಾಯ ದೇವಾಲಯಕ್ಕೆ, ಹಳ್ಳೀ ಸಂಪ್ರದಾಯಗಳಂತೆ ಉಡುಗೆ ತೊಡಿಗೆಗಳನ್ನು ಧರಿಸಿ ಬಾರದ ಹೆಂಗಸರಿಗೆ ಗೇಟಿನೊಳಗೆ ಪ್ರವೇಶವೇ ಇಲ್ಲವೆಂಬ ಕಠಿನ ನಿಬಂಧ!

ಜಯಪುರ ಸಂಸ್ಥಾನದ ಮಹಾರಾಜರು ಜಯಪುರ್ನಲ್ಲಿ, ಶಿಲ್ಪಕಲೆಯಲ್ಲಿ ತಾಜಾಮಹಾಲಿಗಿಂತ ಅತ್ಯದ್ಭುತೀಯವಾದ ಸೌಂದರ್ಯವುಳ್ಳ ಮಹಲೊಂದನ್ನು ಕಟ್ಟಿಸುತ್ತಿದ್ದಾರೆ. ಇದರ ಹೆಸರು "ವಾಯು ಪ್ರಸಾದ"ವೆಂದು. ಈ ಮಹಾಲಿಗೆ 1000 ಪ್ರವೇಶದ್ವಾರಗಳಿವೆ. 3500 ಕಿಟಿಕಿಗಳಿವೆ. ಮಹಲಿನಲ್ಲಿಯ ಸ್ವಯಂಪಾಕ ಗೃಹದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಆಹಾರವು ಸಿದ್ಧವಾಗುವ ವ್ಯವಸ್ಥೆಯಿದೆ. ಮಹಾರಾಜರು ಈಗ ಲಂಡನಿನಲ್ಲಿದ್ದು, ಈ ಮಹಾಲಿಗೆ ಬೇಕಾಗುವ ಅಮೂಲ್ಯವಸ್ತುಗಳನ್ನು ಸಂಗ್ರಹಿಸುತ್ತಿದ್ದಾರೆ.

ಅಖಿಲ ಭಾರತೀಯ ಹಾಕಿ ಟೀಮಿನವರು ಕಳೆದ ಗುರುವಾರ ನ್ಯೂಜೀಲ್ಯಾಂಡಿನ ಮುಖ್ಯ ಪಟ್ಟಣವಾದ ವೆಲ್ಲಿಂಗ್‌ಟನ್ನಿನಲ್ಲಿ ಸೌತ್ ಕ್ಯಾಂಟರ್ಬರಿ ಟೀಮಿನವರ ವೀಲೆ ಹನ್ನೆರಡು ಗೋಲುಗಳನ್ನು ಹೊಡೆದು ಗೆದ್ದಿರುತ್ತಾರೆ. ಭಾರತೀಯ ಆಟಗಾರರು ನ್ಯೂಜೀಲ್ಯಾಂಡಿಗೆ ಹೋದಂದಿನಿಂದಲೂ ಅಲ್ಲಿಯ ಜನರು ಇವರ ಆಟೋಗ್ರಾಫ್ (ಹೆಸರನ್ನು ಸ್ವಹಸ್ತ ಬರೆದುಕೊಡುವುದು)ಗಳಿಗಾಗಿ ಇವರನ್ನು ಬಹಳ ಕಾಡುತ್ತಿದ್ದರೆಂದೂ, ಈಜೆಗೆ ಪ್ರತಿಯೊಬ್ಬ ಆಟಗಾರನೂ ತಮ್ಮ ಪ್ರತಿಯೊಂದು ಆಟೋಗ್ರಾಫಿಗೂ ಆರು ಪೆನ್ಸು ಚಾರ್ಜುಕೊಡಬೇಕೆಂದು ಗೊತ್ತುಮಾಡಿದ್ದಾರೆಂದೂ, ಬಂದ ಹಣವನ್ನು ಇಂಡಿಯಾ ದೇಶದ ಭೂಕಂಪ ಸಹಾಯನಿಧಿಗೆ ಕಳುಹಿಸುವುದಾಗಿ ತಿಳಿಸಿರುತ್ತಾರೆಂದೂ ಹೇಳಲಾಗಿದೆ

ಹಂಗೇರಿಯದಲ್ಲಿ ಎಲ್ಲ ಓದುಗರೂ ಓಟು ಕೊಡಲೇಬೇಕೆಂದು ಕಾನೂನು; ಇಲ್ಲದಿದ್ದರೆ ಜುಲ್ಮಾನೆ. ಆದರೆ ಈಜೆಗೆ ನಡೆದ ಪೆಸ್ಟ್ ಜಿಲ್ಲೆಯ ಜನಾವಣೆಯಲ್ಲಿ 1 ಲಕ್ಷ ಮಂದಿ ಓದುಗರು ಓಟು ಕೊಡಲಿಲ್ಲ. ಇವರಲ್ಲಿ 2 ಸಾವಿರ ಮಂದಿ ಓಟು ಕೊಡದಿರಲು ತಕ್ಕ ಕಾರಣಗಳಿವೆ ಏಕವರಿಗೆ ತಕ್ಕ ಕಾರಣಗಳೆಲ್ಲವಾಗಿ. ಅವರಲ್ಲಿ ಪ್ರತಿಯೊಬ್ಬನೂ 15 ಶಿಲ್ಲಿಂಗು ಗಳಂತೆ ಜುಲ್ಮಾನೆ ತೆರಬೇಕಾಗಿದೆ. ಒಟ್ಟಿಗೆ ಈ ಜುಲ್ಮಾನೆಯ ಹಣ ಸುಮಾರು 1 ಲಕ್ಷ 20 ಸಾವಿರ ಪವುಂಡುಗಳಷ್ಟಾಗುವುದು. ಮುಂದೆ ಈ ರೀತಿ ಓದುವರು ಇಷ್ಟೊಂದು ದೊಡ್ಡ ಪ್ರಮಾಣದಿಂದ ಓಟು ಕೊಡದೆ ಇರುವ ಹಾಗೆ ಈ ಜುಲ್ಮಾನೆಯ ಹಣವನ್ನು ವಸೂಲ್ಮಾಡಬೇಕೆಂದೂ, ಆ ವಿಶ್ವತ್ತವನ್ನು ಆ ರಾಷ್ಟ್ರದ ಧರ್ಮಕಾರ್ಯಗಳಿಗಾಗಿ ವಿನಿಯೋಗಿಸಬೇಕೆಂದೂ ನಿಶ್ಚಯಿಸಲಾಗಿದೆ.

NOTICE.

(The General Assurance Society Ltd., Ajmer.)

This is to inform the public that a deposit receipt book no. 3 containing blank receipts from No. 2355 to 2375, belonging to the above Society, is lost in transit and these receipts have been cancelled. Persons owning such receipts will have no rights whatever over the Society.

501 ಸ್ಪೆಷಲ್ ಸಾಬೂನು ಬಂದಿದೆ.

52—6

ಮೇಲ್ಕರಗತಿಯ ಚೆನ್ನಾಗಿ ಒಗೆಯುವ ಸಾಬೂನು ಬೇಕೆಂದು ಗಿರಾಕಿಗಳು ಹೆಚ್ಚಾದ್ದರಿಂದ 501 ಸ್ಪೆಷಲ್ ಒಗೆಯುವ ಸಾಬೂನನ್ನು ತಯಾರಿಸಿದೆ ಹೆಸರುವಾಸಿಯೂದ ಟಾವ್‌ಕೋ 501 ಒಗೆಯುವ ಸಾಬೂನಿಂದ ಸ್ಪೆಷಲಾಗಿ ತಯಾರಿಸಿದೆ ಇದು ಸ್ವಚ್ಛವಾಗಿಯೂ, ಮೃದುವಾಗಿಯೂ ಇದೆ. ಬಹಳ ನಾಜೂಕಾದ ಬಟ್ಟೆಗಳನ್ನು ಜೊಕ್ಕಟವಾಗಿ ಒಗೆಯಬಹುದು.

TOMCo

ಇತರ ವಿಷಯಗಳಿಗೆ ಬರೆಯಿರಿ—
ಟಾಮ್‌ಕೋ ವೂರಾಟದ ಮಳಿಗೆ,
೧, ಸೆಂಟ್ರಲ್ ಸ್ಟ್ರೀಟ್,
ಬೆಂಗಳೂರು ದಂಡು.

ತಯಾರಿಸುವವರು —
ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ ಮತ್ತು ತಾತಾಪುರಂ.
ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಪ್ರಸಿದ್ಧ ಔಷಧಗಳು.

ನವರತ್ನ
ಅಶೋಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಮಂಟ್ಟಾಗದಿರುವಿಕೆ ಮುಟ್ಟಾಗುವಾಗ ಬರುವ ಹೊಟ್ಟೆನೋವು, ಸೊಂಟನೋವು, ನಿತಾಣ, ಬೆನ್ನುಮೂಳೆನೋವು, ಅಧಿಕಶಾವ, ಸೋಮು ರೋಗ ವಗೈರೆ ಪರಿಹರಿಸಿ ಸ್ತ್ರೀಯರ ಆರೋಗ್ಯವನ್ನು ಕಾಪಾಡುವ ಗರ್ಭ ರಕ್ಷಿಣಾಯು,

ದೊಡ್ಡ ಕುಪ್ಪಿ 2-8-0, ಅರ್ಧ ಕುಪ್ಪಿ 1—6—0.

ನವರತ್ನ
ಸ್ವರ್ಣಮಿಶ್ರಿತ ನವರತ್ನಾವೃತ.

ನಿಜ್ಜಲವಾದ ನಿಮ್ಮ ಶರೀರವನ್ನು ರಕ್ತವೃದ್ಧಿಯಿಂದ ದೇಹಪುಷ್ಟಿಯನ್ನೂ, ವೀರ್ಯವೃದ್ಧಿಯನ್ನೂ, ಖಡಪುಷ್ಟಿಯನ್ನುಂಟುಮಾಡಿ, ನಿಮ್ಮನ್ನು ದೃಢಕಾಯರನ್ನಾಗಿಯೂ, ಆರೋಗ್ಯಾಂತರನ್ನಾಗಿಯೂ ಮಾಡುವ ಭಂಗಾರ ಮಿಶ್ರಿತ ಅನೋಘವಾದ ಟಾನಿಕ್ಕು.

ದೊಡ್ಡ ಕುಪ್ಪಿ 3—8—0, ಅರ್ಧ ಕುಪ್ಪಿ 1—14—0.

ನವರತ್ನ
ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ, ಅರುಚಿ ನಿತಾಣ ವಗೈರೆ ಪರಿಹರಿಸಿ, ಜೀರ್ಣಶಕ್ತಿಯನ್ನೂ, ನರಗಳಿಗೆ ತ್ರಾಣವನ್ನೂ, ಮುಖದಲ್ಲಿ ಕಾಂತಿಯನ್ನೂ, ಮನಸ್ಸಿಗೆ ಉಲ್ಲಾಸವನ್ನೂ ಕೊಡುವ ಪ್ರಸಿದ್ಧವಾದ ಔಷಧವು.

ದೊಡ್ಡ ಕುಪ್ಪಿ 1—8—0, ಅರ್ಧ ಕುಪ್ಪಿ 0—13—0.

ನವರತ್ನ
ಚೈತನಪತ್ರಾಶ.

ಉಬ್ಬಸ, ಖಾಸ, ಕೆಮ್ಮು, ದಮ್ಮು, ಕ್ಷಯ, ಕಫದಲ್ಲಿ ರಕ್ತಬೀಳುವಿಕೆ, ಎದೆನೋವು, ಹುಳಿತೇಗು ವಗೈರೆ ಪರಿಹರಿಸಿ ಎದೆಗೆ ಶಕ್ತಿಯನ್ನು ಕೊಡುವ ಆಯುರ್ವೇದದಲ್ಲಿನ ಪ್ರಸಿದ್ಧವಾದ ಲೇಹ್ಯವು

½ lb. 1—8—0, ¼ lb. 0—13—0.

ಹೆಚ್ಚಿನ ಮಾಹಿತಿಗೆ ಬರೆದುಕೊಳ್ಳಿರಿ—
ಏಜೆಂಟರು—ಎ. ಎಸ್. ಮಾಚಯ್ಯ, ಜನುಳಿಅಂಗಡಿ, ಸಂಟಿಕೊಪ್ಪ. } ಸ್ಟೋರಿಸ್ಟ್—ವಿ. ಬಿ. ಕಾವಾತ್, ಮಹದೇವಪೇಟೆ, ಮಡಿಕೇರಿ
52—6

ನವರತ್ನ ಫಾರ್ಮಸಿ,

ಮಲೇರಿಯೂನವು—ಮಲಿ ಜ್ವರ, ಛಳಿ ಜ್ವರ, 2, 3 ದಿವಸಕ್ಕೊಮ್ಮೆ ಬರುವ ಜ್ವರ ಇಂಜೆಕ್ಷನ್‌ಗಿಂದಲೂ ಯಾವ ಬೇರೆ ಔಷಧದಿಂದಲಾ ಬಿಡದಿರುವ ಜ್ವರಗಳನ್ನು ಗುಣಪಡಿಸುತ್ತದೆ. ಜ್ವರಗಡ್ಡೆ ಸಹ ಕರಗಿಸುತ್ತದೆ. ಸೀಸೆಗೆ ರೂ. 1/8 ಮತ್ತು ಆಣೆ 14.

ರಿಂಗ್ ವರ್ಮ್ ಬಾವು—ಗಜಕರ್ಜ ಹುಳಕಡ್ಡಿ, ಹುಳ ಮೇಯುವುದು, ಇತ್ಯಾದಿಗಳಿಗೆ ಸಿದ್ಧೌಷಧ. ಡಬ್ಬಿಗೆ ಆಣೆ 5.

ಸಿರಪ್ ಬ್ಲಟಿ—ಉಬ್ಬಸ, ನೇವಸ, ಕೆಮ್ಮು, ಕಫ, ದಮ್ಮು ರೋಗಕ್ಕೆ ಪಾತ್ರ. ಸೀಸೆಗೆ ರೂ. 3—8—0 ಮತ್ತು 1—14—0.

ಈಯರ್ ಆಯಿಲ್—ಕಿವಿ ಸೋರುವುದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಠಿಣ ನೋವು ಇತ್ಯಾದಿ ಅಸ್ವಸ್ಥಗಳನ್ನು ಗುಣಪಡಿಸುತ್ತದೆ ½ ಟಿನ್ನಿಗೆ ಆಣೆ 8.

ಬಾಲಗ್ರಹ ಮೂತ್ರೆ—ಮಕ್ಕಳ ಚೇಪೆ, ಕಫ, ಉಬ್ಬಸ, ಮೂಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೊಲೆಹಾಲು ತಿನ್ನದಿರುವಿಕೆ ಇವುಗಳೆಲ್ಲವನ್ನೂ ಶೀಘ್ರವಾಗಿ ಗುಣಪಡಿಸುವುದು 100ಕ್ಕೆ ಆಣೆ 8 ಮತ್ತು 50ಕ್ಕೆ ಆಣೆ 4.

ಟೊತ್ ಡ್ರಾಪ್ಸ್—ಹಲ್ಲುಕೊಳೆತು ಕೂತು ಬಿದ್ದು ವಸಡು ಬೀಗಿ ತಡೆಯಲಾರದ ನೋವಿಗೆ ರಾಮಬಾಣ, ಸೀಸೆಗೆ ಆಣೆ 8

ಜಾಂಡಿಸ್ ಕ್ಯೂರ್—ಪಿತ್ತ ಕಾಮಲೆ, ತಲೆತಿರುಗುವುದು, ಅನಸಿನ ಮುಂತಾಗಿ, ಬಾಯಾರಿಕೆ, ರುಚಿ ತಪ್ಪುವುದು ಅಜೀರ್ಣತೆ ಮಲಬದ್ಧತೆ, ಎದೆಸುಡುವುದು, ನಿದ್ರಾಭಂಗ, ಹಳದಿ ಮೂತ್ರ ಈ ಮೊದಲಾದ ಪಿತ್ತದ ಲಕ್ಷಣಗಳನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1—0—0.

ಸಿರಪು ವೆಸಿಥೂಜ, ಮೇಹ ಕುಠಾರಿ—ಪ್ರಮೇಹ, ಮೂತ್ರಕೃಚ್ಛ, ಮೂತ್ರಹೋಗದಿರುವಿಕೆ, ಮೂತ್ರಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತುಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ. ರೂ. 3—8—0 ಮತ್ತು 1—14—0

ಕಾಮನ್ ಎಕ್ಸ್‌ಟೆರ್ನಲ್ ಬಿಲ್ಲೆಗಳು—ಸಕಲ ತರದ ಹೊಟ್ಟೆ ಹುಳಗಳನ್ನು ನಾಶಪಡಿಸಿ ಜಾರಿಸುವುದರಲ್ಲಿ ಮುಖ್ಯ ಔಷಧಿ. ಡಬ್ಬಿಗೆ ಆಣೆ 5. 100ಕ್ಕೆ ರೂ. 2.

ಟೊತ್ ಪೌಡರ್—ದಂತ ಚೂರ್ಣ. ಡಬ್ಬಿಗೆ ಆಣೆ 5.

ಶುದ್ಧ ಟಿಶ್ಯೂ ಮದ್ದುಗಳೂ, ಹೊಮ್ಮೊಪಥಿ ಔಷಧಗಳೂ ವಿವಿಧ ರೋಗಗಳಿಗಾಗುವ ಇತರ ಮದ್ದುಗಳೂ ನಮ್ಮಲ್ಲಿ ದೊರಕುತ್ತವೆ.

ಕೆಟಲಾಗು ಧವರ್ಮಾರ್ಥ. ಬರೆಯಿರಿ:—

The Malariana Co.; No. 14, Mangalore.

ಮಲೇರಿಯೂನ ಕಂಪೆನಿ, ಹಂಪನಕಟ್ಟೆ; ನಂಬ್ರ 14, ಮಂಗಳೂರು, ದ. ಕ.

52—49

ಕೊಡ್ಲಿಪೇಟೆ ಮಾಧ್ಯಮಿಕ ಶಾಲೆಯ ದ್ವಿತೀಯ ವರ್ಧಂತಿ ಮಹೋತ್ಸವ.

ಮೇಲ್ಕಂಡ ಶಾಲೆಯ ದ್ವಿತೀಯ ವಾರ್ಷಿಕ ವರ್ಧಂತಿ ಮಹೋತ್ಸವವು ತಾರೀಕು 16—5—35ನೇ ಗುರುವಾರ ಕೊಡಗು ಮತ್ತು ಬೆಂಗಳೂರು ಶಾಲೆಗಳ ಇನ್‌ಸ್ಪೆಕ್ಟರ್ ಮೆ. ಎಫ್. ಎಫ್. ಸಿ. ಎಡ್‌ಮಂಡ್ಸ್ ಐ. ಸಿ. ಎ. ಬಿ. ಎಸ್. ಸಿ. ಯವರ ಅಧ್ಯಕ್ಷತೆಯಲ್ಲಿ ಅತ್ಯಂತ ವೈಭವದಿಂದ ಯಶಸ್ವಿಯಾಗಿ ಜರಗಿತು. ಶಾಲೆಯ ಅಂದ ಮೈದಾನಭಾಗದಲ್ಲಿರುವ ಮರಗಳ ತೋಪು, ಆಟದ ವೈದಾನವೂ ಯಥೇಚ್ಛವಾಗಿ ಶೃಂಗರಿಸಲ್ಪಟ್ಟಿದ್ದುವು

ಆಟ ಓಟಗಳು.

ಆ ದಿವಸ ಪ್ರಾತಃಕಾಲ 8 ಗಂಟೆಗೆ ಅಲಂಕರಿಸಲ್ಪಟ್ಟಿದ್ದ ಶಾಲಾ ಆವರಣದ ವೈದಾನದಲ್ಲಿ ಸಾವಿರಾರು ಪ್ರೇಕ್ಷಕ ಜನಸಮುದಾಯವು ಸೇರಿತ್ತು. ಈ ಸೆಂಟರ್‌ಗೆ ಸೇರಿದ ಎಲ್ಲಾ ಶಾಲೆಗಳ ಉಪಾಧ್ಯಾಯರುಗೂ ತಮ್ಮ ತಮ್ಮ ವಿದ್ಯಾರ್ಥಿಗಳೊಡನೆ ದಯಮಾಡಿಸಿದ್ದರು. ಆಟೋಟಗಳಲ್ಲಿ ಭಾಗಿಗಳಾಗುವ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಪಟ್ಟಿಕೆಯನ್ನು ನಿಯಮಿತರಾಗಿದ್ದ ಜಡ್ಜಿಗಳೂ ಸಿದ್ಧರಾಗಿದ್ದರು. ಮೊದಲೇ ತಯಾರಿಸಿದ್ದ ಕಾರ್ಯಕ್ರಮವಟ್ಟಿಯಂತೆ 8 ಗಂಟೆಯಿಂದ ಆಟೋಟಗಳು ಪ್ರಾರಂಭವಾದವು

ಶಾಲಾ ಹರಿಜನ ವಿದ್ಯಾರ್ಥಿಗಳಿಂದ ಒಂದು ಕೋಲ್ಮಿಂಚಾಟವು ಒಹು ತೃಪ್ತಿಕರವಾಗಿ ಅಭಿನಯಿಸಲ್ಪಟ್ಟಿತು. ಈ ಪ್ರಕಾರ 11½ ಗಂಟೆಗೆ ಆಟೋಟಗಳೆಲ್ಲಾ ಮುಗಿದವು.

ವಸ್ತು ಪ್ರದರ್ಶನ.

ಶಾಲೆಯ ಎರಡು ದೊಡ್ಡ ಕೋಣೆಗಳನ್ನು ಶೃಂಗರಿಸಿ. ಒಂದರಲ್ಲಿ ಉಪಾಧ್ಯಾಯರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಜನರಿಂದಲೂ, ಮಹಿಳೆಯರಿಂದಲೂ, ಸುತ್ತಮುತ್ತಲಿನ ಹಳ್ಳಿಯವರಿಂದಲೂ ತಯಾರಿಸಲ್ಪಟ್ಟಿದ್ದ ನಾನಾ ವಿಧವಾದ ಕೈಗಾರಿಕೆ ಸಾಮಾನುಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಜೋಡಿಸಿದ್ದಿತು. ಇನ್ನೊಂದರಲ್ಲಿ ಈ ಶಾಲಾ ಕಿರಿಯ ಗಾರ್ಟನ್ ಉಪಾಧ್ಯಾಯರಾದ ಮೆ. ಯಂ. ಎ ಹೆಚ್ ಚವೂಲ್‌ಸಾಹೇ ಬರವರಿಂದ ಒಂದನೇ ತರಗತಿಗೆ ಸಂತಾನಗಾರ್ಟನ್ ರೀತಿಯಲ್ಲಿ ಬೋಧಿಸಲು ಬೇಕಾಗುವ ಸಾಹಿತ್ಯಗಳು ಕ್ರಮವರಿತು ಜೋಡಿಸಲ್ಪಟ್ಟಿದ್ದವು ಇದಲ್ಲದೆ ಹೂಣಿಗರು, ಕುಶಲಕಾರಿಗಳೂ ಹತ್ತಿ ಹಿಂಜುವ ಮತ್ತು ಕಬ್ಬಿನ ಹಾಲು ಹಿಂಡುವ ಯಂತ್ರಗಳೂ, ಕಬ್ಬಿಣದ ಹಾಗೂ ಹಿತ್ತಾಳೆ ಎರಕದ ಸಾಮಾನುಗಳೂ ಬಂದಿದ್ದವು ಈ ಸಾರಿಯ ವಸ್ತು ಪ್ರದರ್ಶನವು ಕಳೆದ ಸಾರಿಗಿಂತಲೂ ವಸ್ತುಗಳ ಸಂಗ್ರಹನಲ್ಲಿಯೂ, ಜೋಡಣೆಯಲ್ಲಿಯೂ ಅತ್ಯುತ್ತಮ ವ್ಯವಸ್ಥೆಯುಳ್ಳದಾಗಿದ್ದದು ಬಹು ಸೌಂದರ್ಯಾರ್ಹವಾದುದೇ ಸರಿ.

ಉಪನ್ಯಾಸಗಳು ಮತ್ತು ಬಹುಮಾನ ಹಂಚಿಕೆ.

ಶಾಲೆಯ ಮಂಗಡೆಯಲ್ಲಿರುವ ವಿಶಾಲವಾದ ಮರಗಳ ತೋಪಿನಲ್ಲಿ ಈ ವರ್ಷದ ಸಭೆಯನ್ನು ಜರಗಿಸಲೋಸುಗ ಚಪ್ಪರವು ಶೃಂಗರಿಸಲ್ಪಟ್ಟಿತ್ತು. ಇಲ್ಲಿ ನೆರೆದವರೆಲ್ಲರೂ ಸಭೆಸ್ಥರಾದರು ಶಾಲೆಯ ಹೆಡ್ಮಾಸ್ಟರವರು ವರ್ಷದ ವರದಿಯನ್ನೀವಿದರು. ಅನಂತರ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರವರು ವಿದ್ಯಾಭ್ಯಾಸದ ಗುರಿಗಾಗಿ ಸ್ಥಳೀಕ ಸಹಕಾರವನ್ನು ಯಾಚಿಸಿ ಭಾಷಣವನ್ನಿತ್ತರು. ಆ ಬಳಿಕ ಕುಮಾರಿ ಕಾತ್ಯಾಯಿನಿಯವರು ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತು ಭಾಷಣವಿತ್ತರು. ಅನಂತರ ಶಾಲೆಯ ಉಪಾಧ್ಯಾಯರಾದ ವೆ. ಯಂ. ಕೆ. ಜಿ. ಅಬ್ದುಲ್ಲ ಆಲಿಯವರು 'ನವ್ಯ ಒಡತನ'ವೆಂಬುದನ್ನು ಕುರಿತು ಉಪನ್ಯಾಸವಿತ್ತರು. ಅನಂತರ ಅಧ್ಯಕ್ಷರು ಸಂಧರ್ಭಾನುಗಳಲ್ಲಿ ಜಯಶೀಲರಾದವರಿಗೂ ವಸ್ತು ಪ್ರದರ್ಶನದಲ್ಲಿ ಬಹುಮಾನ ಪಡೆದ ಯೋಗ್ಯ ವಸ್ತುಗಳನ್ನು ತಯಾರಿಸಿದವರಿಗೂ, ಶಾಲಾ ವಿದ್ಯಾರ್ಥಿ—ವಿದ್ಯಾರ್ಥಿನಿಯರಲ್ಲಿ ಹಿರಿಯರಾದವರಿಗೂ ಒಹುಮಾನವನ್ನು ಕೊಟ್ಟರು.

ಇದಾದ ಮೇಲೆ ಅಧ್ಯಕ್ಷರ ಭಾಷಣವಾಯಿತು. ತದನಂತರ 'ದಿ ಐಡಲ್ ಬ್ರೇಕರ್' ಎಂಬ ಇಂಗ್ಲಿಷ್ ನಾಟಕವೂ 'ಸಾಧು ತುಕಾರಾಮ' ಎಂಬ ಕನ್ನಡ ನಾಟಕವೂ ಶಾಲಾ ಮಕ್ಕಳಿಂದ ಜಲೆ ರೀತಿಯಲ್ಲಿ ಅಭಿನಯಿಸಲ್ಪಟ್ಟಿತು. ನಾಟಕಗಳು ಮುಗಿದ ನಂತರ ಶಾಲಾ ಉತ್ಸವವು ಕೊನೆಗೊಂಡಿತು

ನಜ್ರದ ಉಂಗುರಗಳು ಒಂಕ್ಕೆ ಆಣೆ ೧೨.

ಈ ಉಂಗುರಗಳನ್ನು ಇವಿ ಟೇಷನ್ ನಜ್ರದ ಕಲ್ಲುಗಳನ್ನು ಇಟ್ಟು ರೊಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಿದ ಕಟ್ಟಿವೆ. ಇವರ ಒಣ್ಣಾವು ಎಂದಿಗೂ ಕೆಡದಂತೆ ಇಲೆಕ್ಟ್ರಿಕ್ ಕ್ರಮದಿಂದ ಒಣ್ಣಕೊಟ್ಟಿದೆ, 1ಕ್ಕೆ 12 ಆಣೆ 3 ಉಂಗುರಗಳಿಗೆ 1 ಟೈಂಪೀಸನ್ನೂ, 6 ಉಂಗುರಗಳಿಗೆ 1 ವಾಕೆಟ್ ವಾಚನ್ನೂ, 12 ಉಂಗುರಗಳಿಗೆ 1 ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುವೆವು.



ವಿಳಾಸ—ನೇಥಾ ಎಂಡ್ ಕಂಪೆನಿ,
11, ಪೆರಿಯನಾಯ್ಕರಾನ್ ಸ್ಟ್ರೀಟ್,
52—4 ಸೌಕಾರ್‌ಪೇಟೆ, ಮದ್ರಾಸು.

ಗರ್ಜಿ.

ಪ್ರಜಾಭಿವೃದ್ಧಿ ಅದರೊಡನೆ ಸಂಪದಭಿವೃದ್ಧಿಯೂದಮೂ
ಕ್ಕೆ ಜನಾಂಗದೇಳಿಗೆಯೂದಂತಾಗುವುದಿಲ್ಲ. ಪ್ರತಿ ವ್ಯಕ್ತಿ
ಯೂ ಬಲಶಾಲಿಯೂಗಬೇಕು, ಕಟ್ಟಾಳಾಗಬೇಕು. ಆಗಲೇ ಜ
ನಾಂಗದೇಳಿಗೆಯೂಗುವುದು. ಆರೋಗ್ಯಕಾಯವೆಂದರೆ ಯೂ
ರೋಗವಿಲ್ಲದಿರುವುದೆಂದು ಸೂಕ್ಶ್ಯವಾಗುವುದಿಲ್ಲ. ದೇಹ
ಬಲವಾಗಿರಬೇಕು, ಗಟ್ಟಿ ಮುಟ್ಟಾಗಿರಬೇಕು. ಆಗಲೇ
ವು ಆರೋಗ್ಯಭಂತರೆಂದು ಹೇಳಿಕೊಳ್ಳಬಹುದು. ಬಲ
ದೆ ದೇಹದಲ್ಲಿ ಶಾಂತಿ ಸಮಾಧಾನ ನೆಲಸಿರುವುದಿಲ್ಲ. ಬು
ಜಂಡಲ. ಡೈವಿಕ ಮನಸ್ಸು ಲಭಿಸುವುದು ಅತಿ ಕಷ್ಟ.
ಕ್ಕನಿಗೆ ದುಡುಕು ಹೆಚ್ಚು. ಕೋಪ ಬೇಗನೆ ಬರುವುದು.
ಎರಾಲೋಚನೆ ಕಡಮೆ. ಇದರಿಂದ ಅನೇಕ ಅನರ್ಥಗಳು
ಭವಿಸುವವು. ಅಶಕ್ತರ ಮಕ್ಕಳು ಹೆಚ್ಚು ಅಶಕ್ತರಾಗಿ
ಟ್ಟುವರು. ಅಂತ ನಿಶ್ಶಕ್ತರಾದ ಮಕ್ಕಳಿಂದ ಜನಾಂಗಕ್ಕೆ
ಚ್ಚು ಕೇಡೇ ಹೊರತು ಉಪಕಾರವಿಲ್ಲ. ಬಲಹೀನನ ಮ
ಸ್ಸೂ ಬಲಹೀನ ಅದರಿಂದ ಅವನಿಗೆ ದೇವರು ಬಲು ದೂರ
ಾಗುವನು, ಎಂದು ಸ್ವಾಮಿ ವಿವೇಕನಂದರು ಹೇಳಿರುವರು.
ಾಮಿ ವಿವೇಕನಂದರ ತಂದೆಯು ಉದಾರಿ, ತ್ಯಾಗಿ ಆದ್ದರಿಂ
ತಾನು ಸಂಪಾದಿಸುದುದನ್ನೆಲ್ಲಾ ಪರರ ಸೇವೆಯಲ್ಲಿ ವ್ಯ
ಯ ಮಾಡಿಬಿಡುತ್ತಿದ್ದನು. ಒಂದು ದಿನ ನರೇಂದ್ರನಿಗೆ—ವಿ
ವೇಕಾನಂದರ ಮೊದಲ ಹೆಸರು—ತನ್ನ ತಂದೆಯು ಉದಾರ ನಡ
ಳಿಕೆಯಲ್ಲಿ ಏನೋ ಬೇಸರ ಹುಟ್ಟಿ ತಂದೆಗೆ 'ನೀನು ಗಳಿಸಿ
ಎದನ್ನೆಲ್ಲ ಹೀಗೆ ವ್ಯಯಮಾಡಿಬಿಟ್ಟರೆ, ಮಗನಾದ ನನಗೆ
ನಿಟ್ಟಿರುವುದೇನು?' ಎಂದನಂತೆ. ತಂದೆಗೆ ನಗು ಬಂತು.
ನಗೇನು ಗಳಿಸಿಟ್ಟಿರುವೆನೆಂಬುದನ್ನು ಕನ್ನಡಿಯಲ್ಲಿ ನೋಡಿ
ೋ ನರೇಂದ್ರ' ಎಂದನಂತೆ. ನರೇಂದ್ರನು ಅದೇನೆಂದು
ನ್ನಡಿಯಲ್ಲಿ ನೋಡಿದನು. ಅಲ್ಲಿ ಕಂಡುದುದು ನರೇಂದ್ರ
ಪ್ರತಿಬಿಂಬ. ಅಂದು ತಂದೆಗೆ ಮಗನೇನು ಗಳಿಸಬೇಕಾದು
ು, ತನ್ನ ತಂದೆ ತನಗೇನು ಗಳಿಸಿಕೊಟ್ಟಿರುವನೆಂಬುದು ಗೋ
ರವಾಯಿತು. ನರೇಂದ್ರನಿಗಾಗಿ ಅವನ ತಂದೆ ಗಳಿಸಿಟ್ಟಿರು
ದು ದೃಢಕಾಯ, ಆಸ್ತಿ. ಅವ್ವರಿಂದಲೇ ನರೇಂದ್ರನು ತೃ
ನಾದನು ಎಷ್ಟು ಜನ ತಂದೆ ತಾಯಿಗಳು ತಾವು ಅಂತ
ಗಟ್ಟಿಮುಟ್ಟಾದ ಮಕ್ಕಳನ್ನು ಪಡೆದಿರುವೆವೆಂದು ಹೆಮ್ಮೆಪ
ಡಲಿರುವರು?

ನಮ್ಮ ಹಳ್ಳಿಗಳಲ್ಲಿ ಹಿಂದೆ ಇಂಥ ಮಕ್ಕಳನ್ನು ಪಡೆಯ
ುತ್ತಿದ್ದುದು ಅಪರೂಪವೇನಾಗಿರಲಿಲ್ಲ. ಹಳ್ಳಿಯವರೆಲ್ಲರೂ
ಸಾಧಾರಣವಾಗಿ ದೃಢಕಾಯರಾಗಿರುತ್ತಿದ್ದರು. ತನ್ನ ಮಗ
ನು ಮತ್ತೊಬ್ಬರೊಡನೆ ಕುಸ್ತಿ ಮಾಡಿ ಗೆದ್ದನೆಂದರೆ ತಂದೆ ತಾ
ಯಿಗಳಿಗಾಗುತ್ತಿದ್ದಾನಂದ ಸಂತೋಷವುದರಿಂದಲಾ ಆಗುತ್ತಿರಲಿ
ಲ್ಲ. ಹಳ್ಳಿಯವರು ಕಷ್ಟಾಳುಗಳು, ಆದುದರಿಂದ ಸೋಮೂರ
ನದಿಂದಾಗುವ ನಷ್ಟ ಅವರಿಗಿಲ್ಲ. ಹಿಂದೆ ಅವರು ಮದುವೆ
ಾಗುತ್ತಿದ್ದುದು ಮೂವತ್ತು ವರ್ಷ ವಯಸಾದ ಮೇಲೆ ಆ
ದರಿಂದ ಶೂರರದ ಅಂಗಗಳೆಲ್ಲ ಗಟ್ಟಿಯೂದ ಮಕ್ಕಳನ್ನು ಪಡೆ
ಯುತ್ತಿದ್ದರು ಪ್ರತಿ ಹಳ್ಳಿಗಳಲ್ಲೂ ಗರಡಿಗಳಿರುತ್ತಿದ್ದವು.
ಪ್ರತಿಯೊಬ್ಬ ಯುವಕನೂ ಗರಡಿಗೆ ಹೋಗಿ ಕಸರತ್ತು ಮಾಡಿ
ತನ್ನ ದೇಹಸನ್ನು ಬಲಗೊಳಿಸುತ್ತಿದ್ದನು. ಇಂತಹ ಕಾಲದ
ಲ್ಲೇ ವೀರರ ಜ್ಞಾಪಕಾರ್ಥವಾಗಿ ಆ ವೀರರು ಮಾಡಿದ ಸಾ
ಹಸಕಾರ್ಯದ ನೆನಪಿಗಾಗಿ, ಪಂದಿನವರ ಮೇಲ್ಪಂಕ್ತಿಗಾಗಿ
ವೀರಗಲ್ಲುಗಳನ್ನು ಹಳ್ಳಿಗಳಲ್ಲಿಟ್ಟರು. ಆದರೆ ಇಂದಿನ ಜ
ನಾಂಗದವರಾದ ನಾವೇನಾಗಿದ್ದೇವೆ? ಜನರನ್ನು ವೀರರನ್ನಾ
ಗಿ ಮಾಡುತ್ತಿದ್ದ ಗರಡಿಗಳು ಮಾಯವಾಗುತ್ತಿವೆ. ಇದ್ದರೂ
ಅವುಗಳೆ ಜೂಜಿನ ಕಟ್ಟೆಗಳಾಗಿವೆ. ಸೋಮೂರಿಗಳು ಅಲ್ಲಿ
ಕಲೆತು ಜೂಜಾಡುತ್ತ ಮುಂದಿನ ಜನಾಂಗವನ್ನೂ, ಆ ದಾರಿಗೆ
ಳೆಯುತ್ತಿದ್ದಾರೆ. ಹಳ್ಳಿಯವರೀಗ ನಿರ್ಜೀರ್ಯರಾಗುತ್ತಿದ್ದಾ
ರೆ, ನಿಶ್ಶಕ್ತರಾಗುತ್ತಿದ್ದಾರೆ. ಧೈರ್ಯವೂ ಅಳಿಸಿಹೋಗುತ್ತಿದೆ.
ಬಲಹೀನರಾದ ದೋಗದಿಂದ ನೈರಳಿನ ಮಕ್ಕಳನ್ನು ಪಡೆದು
ಜನಾಂಗಕ್ಕೆ ಆ ಮೂಲಕ ದೇಶಕ್ಕೆ ಘಾಪವನೂಡುತ್ತಿದ್ದಾರೆ.
ಆ ಗರಡಿಗಳು ಪ್ರತಿ ಹಳ್ಳಿಗಳಲ್ಲೂ ಪುನರುಜ್ಜೀವನವಾಗದಿದ್ದ
ರೆ ಒಂದೆರಡು ಶತವೂನಗಳಲ್ಲಿ ನಮ್ಮ ಜನಾಂಗ ಪ್ರಯೋಜ
ನಕ್ಕೆ ಬರದ ಜನಾಂಗವಾಗಿ ಪರಿಣಮಿಸುವುದರಲ್ಲಿ ಸಂದೇಹ
ವಿಲ್ಲ.

ಹಿಂದೆ ಪ್ರತಿ ಹಳ್ಳಿಗಳಲ್ಲೂ ಇದ್ದ ಗರಡಿಗಳು ಎಷ್ಟರಮ
ಟ್ಟಿಗೆ ಜನಾಂಗ ಸೇವೆಮಾಡುತ್ತಿದ್ದುವೆಂಬುದನ್ನು ತಿಳಿದರೆ ಅದ
ರ ಪುನರುದ್ಧಾರದ ಅಗತ್ಯತೆ ಗೊತ್ತಾಗುತ್ತದೆ. ಗರಡಿಯು
ಆ ಹಳ್ಳಿಯ ಯುವಕರನ್ನು ವೀರರನ್ನಾಗಿ, ಬಲಶಾಲಿಗಳನ್ನಾ
ಗಿ ಮಾಡುತ್ತಿದ್ದದೊಂದು ಕೆಲಸವಲ್ಲ. ಊರಿನವರಲ್ಲಿ ಒಗ್ಗ
ಟ್ಟು ನೆಲಸುವಂತೆ ಮಾಡುತ್ತಿದ್ದಿತು. ಗರಡಿಗೆಂದು ಎಲ್ಲರೂ
ಸೇರಬೇಕಾಗುತ್ತಿತ್ತು. ತಂದೆ ತಾಯಿಯರು ತಮ್ಮ ಮಕ್ಕಳ
ಶಕ್ತಿ ಪ್ರದರ್ಶನಕ್ಕೆ ಬಂದು ಕೂಡುತ್ತಿದ್ದರು. ಆದರಿಂದ ಅವ
ರಲ್ಲಿ ಸೌಹಾರ್ದತೆ ಉಂಟಾಗುತ್ತಿತ್ತು. ಗಂಡಿ ಎಂದರೆ
ಊರಿನಲ್ಲಿ ನ್ಯಾಯವನ್ನು ಕಾಪಾಡುವುದಕ್ಕಾಗಿ ಊರಿನಿಂದ
ಸ್ಥಾಪಿಸಲ್ಪಟ್ಟ ಸಂಸ್ಥೆಯಾಗಿತ್ತು. ಯಾರಾದರೂ ತಪ್ಪು
ಮಾಡಿದರೆ ಅವನು ಈ ಗರಡಿಗೆ ವೈರಿ. ಗಂಡಿ ಊರಿನ ವೀ
ರರೆಲ್ಲರ ಕೂಟವಾಗಿದ್ದುದರಿಂದ ತಪ್ಪು ಮಾಡಿದವನನ್ನು ಶಿ
ಕ್ಷಿಸುವುದು ಕಷ್ಟವಾಗುತ್ತಿರಲಿಲ್ಲ. ಆದುದರಿಂದ ಜನರು ತ
ಪ್ಪು ಮಾಡಲು ಹೆದರುತ್ತಿದ್ದರು ತಪ್ಪು ಯಾವಾಗಲೂ ಪ
ಕ್ಷಪಾತವಿಲ್ಲದೆ ಗರಡಿಯವರಿಂದ ಕಂಡುಹಿಡಿಯಲ್ಪಡುತ್ತಿತ್ತು.
ಜನರು ಸಾಧಾರಣವಾಗಿ ಕೋರ್ಟಿನ ವರೆಗೆ ವ್ಯಾಜ್ಯ ತೆಗೆದು
ಕೊಂಡು ಹೋಗಿ ಬಳಲಿ ಬೆಂಡಾಗಿ ಕಂಡವರ ಕಾಲೆಲ್ಲ ಹಿಡಿ
ಯುವ ಗೋಳಾಗ ಇರಲಿಲ್ಲ. ಗರಡಿಗೆ ಸೇರಿದವರಲ್ಲಿ ಒಂ
ದು ನಿಬುಧನೆ ಇತ್ತು. ಗರಡಿಗೆ ಸೇರಿದ ಯುವಕನಾದೂ
ಮೂವತ್ತು ವರ್ಷಗಳ ವರೆಗೆ ಇಲ್ಲವೇ ಗೊತ್ತಾದಷ್ಟು ಕುಸ್ತಿ
ಗಳಲ್ಲಿ ಗೆಲ್ಲುವ ವರೆಗೆ ಮದುವೆಯೂಗಕೂಡದೆಂದು. ಇದ
ರಿಂದ ಊರಿನ ಯುವಕರು ಬಲವಾಗಿರುತ್ತಿದ್ದರಲ್ಲದೆ ತ ವು
ವ ದುವೆಯೂದ ಮೇಲೆ ಬಲಶಾಲಿಗಳಾದ ಮಕ್ಕಳನ್ನು ಪಡೆದು
ಅನಂದ ಪಡುತ್ತಿದ್ದರು.

ಗರಡಿಗಳು ಮಾಡುತ್ತಿದ್ದ ಮತ್ತೊಂದು ಜನಸೇವೆ ಎಂದ
ರೆ—ಊರಿನಲ್ಲಿ ಯಾರೂ ನೀಚವೃತ್ತಿಯಿಂದ ನಡೆಯುದಂತೆ
ನೋಡಿಕೊಳ್ಳುತ್ತಿದ್ದರು. ಯಾವನಾದರು ಅಥವ ಯಾವಳಾ
ದರು ನಡತೆಗೆಟ್ಟು ಹಾದರಕ್ಕೆ ಕಾಲಿಟ್ಟರೆಂದರೆ ಗಂಡಿಯವರು
ಅವರನ್ನು ತಾಟಿಗೆ ತೆಗೆದುಕೆಳ್ಳುತ್ತಿದ್ದರು. ಹಾಗೆ ಕೆಟ್ಟ
ದಾರಿಗೆ ಬಿದ್ದವರು ಊರು ಬಿಟ್ಟು ಓಡಿಹೋಗಬೇಕು, ಇಲ್ಲ
ದಿದ್ದರೆ ಸಂಯೂದ ದಾರಿಗೆ ಬರಬೇಕು, ಹಾಗೆ ಮಾಡುತ್ತಿದ್ದರು.
ಪ್ರತಿ ಹಳ್ಳಿಗಳಲ್ಲೂ ಇದೇ ಕಟ್ಟಿದ್ದುದರಿಂದ ಓಡಿಹೋಗುವು
ದಕ್ಕಿಂತ ಸರಿಯೂದ ದಾರಿಗೆ ಬರುತ್ತಿದ್ದವರೇ ಹೆಚ್ಚು. ಈ
ವಿಷಯದಲ್ಲಿ ಬೆಂಗಳೂರಿನ ಮುದುಕರೊಬ್ಬರು (ಅವರಿಗೀಗ
ತೊಂಬತ್ತು ವರ್ಷವಾಗಿದೆ) ಒಂದು ನಡೆದ ಕತೆ ಹೇಳುವರು
ಆರ ಇಪ್ಪತ್ತೈದು ಅಥವ ಇಪ್ಪತ್ತಾರನೇ ವಯಸ್ಸಿನಲ್ಲಿ ಅವ
ರು ಗೆಂಡಸತ್ತೊಬ್ಬ ಹೆಂಗಸಿನ ಮೇಲೆ ಕಣ್ಣು ಹಾಕಿದರಂತೆ.
ಆದರವರಿಗೆ ಹೆದರಿಕೆ. ಏನಾದರೂ ಮಾಡಿ ಆ ಹೆಂಗಸಲ್ಲಿ
ಕೂಡಬೇಕೆಂಬುದು ಬಲವಾದ ಆಶೆ ಅವರಿಗೆ. ಅಂತು ಒಂ
ದು ರಾತ್ರಿ ಸರಿಹೊತ್ತಿನಲ್ಲಿ ಆಕೆಯ ಮನೆಗೆ ಹೋಗುವೆಂ
ಬುದು ಗೊತ್ತಾಗಿತ್ತು. ಗರಡಿಯವರಿಗಿದು ಗೊತ್ತಾಗದಿರಲಿ
ಲ್ಲ. ಗರಡಿಯವರು ಗೂಢಚಾರಿಗಳೂ ಆಗಿದ್ದರು. ಹೀಗೆ
ಕೆಟ್ಟ ತವ್ಮಿಡನಾಡಿಗೆ ಬುದ್ಧಿ ಕಲಿಸಬೇಕೆಂಬುದು ಮನವೂ
ಡಿದರು. ರಾತ್ರಿ ಆ ಮನೆಯ ಪಕ್ಕದಲ್ಲಿ ಅಡಗಿ ಕಾಯ್ದಿದ್ದ
ರಂತೆ. ಸರಿ ಆಸಾಮಿ ಬಂದ, ಅಡಗಿದ್ದವರು ಬಂದು ಆತನ
ನ್ನು ಹಿಡಿದು ಕೆನ್ನೆಗೆರೆಡು ಕೊಟ್ಟರು. ಕಳ್ಳನೇಸು ಮಾಡ
ಅತರದೆ ಬಾಯಿ ಮುಚ್ಚಿ ಹಿಂದಕ್ಕೆ ಹೆಜ್ಜೆದ. ಸರಿ ಕಲ್ಲುಗಳ
ಸುರಿಮಳೆ ಆ ಹೆಂಗಸಿನ ಮನೆಯ ಮೇಲೆ.. ಆಕೆ ಬಂದು ತ
ನ್ನ ತಪ್ಪೊಪ್ಪಿಕೊಂಡು, ಇನ್ನು ಮೇಲೆ ಹಾಗೆ ಮಾಡುವುದಿ
ಲ್ಲವೆಂದು ಒಪ್ಪಿಕೊಂಡ ಮೇಲ್ಗೆಯೇ ಗರಡಿಯವರು ಸುಮ್ಮ
ನಾದರಂತೆ. ಈ ಮುದುಕರು ಹೀಗಲೂ 'ಆಗ ನನ್ನನ್ನು ಗರ
ಡಿಯವರು ಹಾಗೆ ತಡೆಯದಿದ್ದಿದ್ದರೆ ನನ್ನ ಜೀವನ ಅಪವಿತ್ರ
ವಾಗುತ್ತಿತ್ತಲ್ಲದೆ, ಇಂಥ ಮಕ್ಕಳನ್ನು ನಾನು ಹೊಂದುತ್ತಿರಲಿ
ಲ್ಲ' ಎಂದು ಹೇಳುತ್ತಾರೆ. ಇಂಥಾ ಪವಿತ್ರತೆಯನ್ನು ಗರ
ಡಿಯವರು ಹಳ್ಳಿಯಲ್ಲಿ ಸಾಧಾರಣುವಾಗಿ ಕಾಪಾಡುತ್ತಿದ್ದರು. ಹಳ್ಳಿಯ ಗರ
ಡಿಗಳಿಂದ ಒಂದೊಂದುನೇಳೆ ಹಳ್ಳಿಗಳಿಗೆ ವೈರ್ಯ ಬೆಳೆಯು
ತ್ತಿತ್ತು. ಆದರದು ಅನಿತ್ಯವಾದದ್ದು. ಘನವಾದ ಜನಸೇ
ವೆಯು ಮುಂದೆ ಇಂಥ ಒಂದೆಂಡು ಸನ್ನಿವೇಶಗಳು ಗಣನಾ
ರ್ಹವಾದವುಗಳಲ್ಲ.

ಈಗಲೂ ನಾವು ಅಪರೂಪವಾಗಿ ಹಿಂದಿನ ಗರಡಿಗಳಲ್ಲಿ
ಕ್ಷಣದ ವೂದರಿಗಳನ್ನು ಹಳೆಯ ತಲೆಮುಪ್ಪುರಲ್ಲಿ ನೋಡಲು
ಸಾಧ್ಯ. ಕಳ್ಳತನ, ದೊಂಬೆದರೆಸೆಗಳನ್ನು ನೋಡಿದರೆ ನ
ಮ್ಮ ಹಳೆಯ ಶಿಕ್ಷಣವನ್ನು ಕಳೆದುಕೊಂಡೆವು ಎಂದು ವ್ಯಸನ
ಪಡಬೇಕಾಗಿದೆ. ದೊಂಬೆ ವರಸೆಗಳಂದ ವೀರನೊಬ್ಬನೇ ಅ
ನೇಕ ಮಂದಿ ಕಳ್ಳರನ್ನು ಜಯಿಸಬಲ್ಲವನಾಗಿದ್ದನೆಂದು ಹೇ
ಳುವುದುಂಟು. ದೊಂಬೆಯನ್ನು ತಿರುಗಿಸುತ್ತಾ ನಾನಾ ಕಡೆ
ಗಳ ಕಲ್ಲೆಸೆಗೆಗಳನ್ನು ತಡೆಯಲು ಸಾಧ್ಯ. ಇಂಥಾ ಸಾಹಸ
ಕಾರ್ಯಗಳಿಂದಲೇ ಊರಿನ ಮೇಲೆ ದಾಳಿಬರುತ್ತಿದ್ದ ಕಳ್ಳರ
ನ್ನು ನಿರಾಯಸವಾಗಿ ಓಡಿಸಲು ನಮ್ಮ ಹಿಂದಿನ ವೀರರಿಗೆ ಸಾ
ಧ್ಯವಾಗಿತ್ತು. ನಮಗೆ ಈ ಸಾಹಸ ಕಾರ್ಯಗಳೆಲ್ಲವೂ ಕನ
ಸಿನೊಳಗಿನ ಮಾತಿನಂತಿವೆ.

ಗರಡಿಗಳೀಗ ಏನಾಗಿವೆ? ನಾವು ಪ್ರತಿ ಹಳ್ಳಿಗಳಲ್ಲೂ
ಈಗ ನೋಡುತ್ತಿರುವುದು ಹಿಂದಿನ ಸಾಹಸ ಕಾರ್ಯಗಳನಲ್ಲ,
ಒಗ್ಗಟ್ಟನಲ್ಲ, ವೀರರನ್ನಲ್ಲ, ಪೂರ್ವಾಯುರುಷನ, ಕುಯುಕ್ತಿ
ಅಸೂಯೆ, ಪಾರ್ಟಿಗಳು, ನಿಶ್ಶಕ್ತಿ, ನಿರ್ವೀರ್ಯತೆಗಳನ್ನು.
ಹಿಂದೆ ಯಾರಾದರೂ ದೊಡ್ಡ ಗಂಡನೇ ಅಥವ ಮತ್ತಿನ್ನಾ
ದರೂ ದೊಡ್ಡ ಮನುಷ್ಯರು ಹಳ್ಳಿಗೆ ಹೋದರೆ ಊರಿನ ಯಜ
ಮಾನನು ಅವರನ್ನು ಗರಡಿಯಂಗಳದ ಸಾಹಸ ಕಾರ್ಯಗಳಿಂದ
ಸಂತೋಷಪಡಿಸುತ್ತಿದ್ದನು ಈತನು ಮತ್ತೊಂದು ಊರಿಗೆ
ಹೋದರೀತನಿಗೂ ಅದೇ ತರಹದ ಸತ್ಕಾರ ಕಾದಿರುತ್ತಿತ್ತು.
ಈಗಲೂ ಅನೇಕ ಹಳ್ಳಿಗಳ ರಂಗ (ಊರಿನ ಮಧ್ಯೆ ಊರಿನವ
ರು ಸುಗ್ಗಿಯ ಕುಣಿತ ಮತ್ತು ಇನ್ನಿತರ ಹಳ್ಳಿಯ ಹಬ್ಬಗಳ
ನ್ನು ನೆವೇರಿಸಲು ಗುಂಡಾದ ಸ್ಥಳವಿರುವುದಕ್ಕೆ ರಂಗವೆಂದು
ಹೆಸರು. ಈ ರಂಗದ ಪಕ್ಕಗಳಲ್ಲಿ ಚಾವಡಿ, ದೇವಸ್ಥಾನಗಳಿ
ರುತ್ತವೆ) ದಲ್ಲಿ ದೊಡ್ಡ ದೊಡ್ಡ ಕಲ್ಲುಗಂಡುಗಳು ಬಿದ್ದಿರು
ವವು ಆ ಕಲ್ಲು ಗುಂಡುಗಳನ್ನು ಉರುಳಿಸಲೂ ಸಹ ಈಗಿ
ನವರು ಶಕ್ತರಾಗಿಲ್ಲ. ಹಿಂದಿನ ನಮ್ಮ ವೀರರೊಬ್ಬನೇ ಆ ಗುಂ
ಡುಗಳನ್ನು ದೂರದ ಗುಡ್ಡದಿಂದ ಹೊತ್ತು ತಂದು ಅಲ್ಲಿ ಹಾಕಿದ
ದರಂತೆ ಆ ಗುಂಡನ್ನು ಮುಂಡಿಯ ವರೆಗೆ, ನಡುವಿನ ವರೆಗೆ, ಎದೆ
ಯ ವರೆಗೆ, ತಲೆಯ ಮೇಲೆ ಎತ್ತುತ್ತಿದ್ದ ವೀರರಿವ್ವರು. ಈ ಪ್ರ
ದರ್ಶನವು ನಿತ್ಯ ಸಂಜೆ ಜನರು ಎಂತಾವುವಾಗಿ ಸೇರಿದಾಗ ನ
ಡೆಯುತ್ತಿತ್ತು. ಹಳ್ಳಿಗಳಲ್ಲೀಗ ನಾವು ಆ ವೈಭವಗಳನ್ನು
ಎಲ್ಲಾ ನೋಡಲಾರೆವು ಹಳ್ಳಿಯವರು ಅವುಗಳನ್ನೆಲ್ಲಾ ಮರೆ
ತಿದ್ದಾರೆ.

ಮತ್ತೆ ಗರಡಿಗಳು ಹಳ್ಳಿಗಳಲ್ಲಿಯೂ ಉಂಟಾಗಬೇಕು.
ಹಿಂದಿನಂತೆಯೇ ಅವುಗಳು ತಮ್ಮ ಕೆಲಸಗಳನ್ನು ಕೈಗೊಳ್ಳಬೇ
ಕು. ಮತ್ತೆ ಹಳ್ಳಿಗಳವರು ವೀರರಾಗಬೇಕು; ಬಲಶಾಲಿಗ
ಳಾಗಬೇಕು. ಶುಕ್ರವು ಜನಾಂಗವನ್ನುಂಬುವಂತಾಡಬೇಕು.
ದೇಶದೇಳ್ಗೆಯನ್ನು ತರಬೇಕು. ಇಲ್ಲದಿದ್ದಲ್ಲಿ ಇನ್ನು ಹೊಂ
ಚ ಕಾಲದಲ್ಲಿ ಹಳ್ಳಿಗಳು ಹಾಳಾಗುವುದಲ್ಲದೆ ಹಳ್ಳಿಗಳೇ ಆ
ಧಾರವಾಗಿರುವ ಈ ದೇಶವೂ ಹೀನಸ್ಥಿತಿಗೆ ಬರುವುದರಲ್ಲಿ ಸಂ
ದೇಹವಿಲ್ಲ.

ನಮ್ಮ ಹಳ್ಳಿಯ ಸಹೋದರರು ಮನವೂಡಬೇಕು, ಮು
ತ್ತೆ ಹಳ್ಳಿಗಳನ್ನು ವೀರರ ಬೀಡಾಗಿ ಮಾಡಲು ಅಳಿದುಹೋಗಿ
ರುವ ಗರಡಿಗಳನ್ನೆಲ್ಲ ತಮ್ಮ ಹಳ್ಳಿಗಳಲ್ಲಿ ಸ್ಥಾಪಿಸಬೇಕು. ತ
ಮ್ಮ ಮಕ್ಕಳು ಹಿಂದಿನ ವೀರರಂತಾಗಲು ಸಾಹಸಪಡಬೇಕು.
ದೇಹಬಲದೊಡನೆ ಬುದ್ಧಿಯು ಬೆಳೆಯುತ್ತದೆ, ಅದರೊಡನೆ ವಿ
ದೆಯು ವಿಶಾಲವಾಗುತ್ತದೆ. ಇವೆಲ್ಲದರೊಡನೆ ಜ್ಞಾನ ಹೆಚ್ಚು
ತ್ತದೆ. ಇದರಿಂದ ತಮ್ಮೂರ ಪ್ರೇಮ ಅದರಿಂದ ದೇಶ ಪ್ರೇಮ
ಬರುತ್ತದೆ. ಆಗ ದೇಶದ ಹಿತಕ್ಕಾಗಿ ಗುದ್ದಾಡಲು ಜನಾಂಗ ಶ
ಕ್ತವಾಗುತ್ತದೆ. ಈ ಎಲ್ಲ ವೈಭವಗಳಿಂದ ಪ್ರತಿ ಹಳ್ಳಿಯೂ
ಎಲ್ಲರ ಮನಸ್ಸನ್ನಾಕರ್ಷಿಸಿ ದೇಶಪ್ರೇಮಿಗಳು ತಮ್ಮ ಮನಸ್ಸ
ನ್ನು ಹೆಚ್ಚಾಗಿ - ಹಳ್ಳಿಯುದ್ಧಾರದಲ್ಲಿಡುವಂತೆ ಮಾಡುತ್ತದೆ.
ಇಂಥ ವೈಭವದ ಹಳ್ಳಿಗಳನ್ನು ನಾವೆಂದು ನೋಡುವುದು?

'ಗ್ರಾಮ ಸೇವೆ'

ಅಪೂ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಂಗಣಿಂದಿತಪ

ಡಿ. ಗೋಪಾಲಾಚಾರ್ಯರವರ

ಬಾಲಭಾಸ್ಕರ

(ಗವರ್ನಮೆಂಟು ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ.

ಶೀಘ್ರವಾಗಿ ಗುಣವೂಡುವ ಅತ್ಯುತ್ತಮವಾದ ಔಷಧವು.

ಒಂದು ತಿಂಗಳಲ್ಲಿ ಅಪೋಘವಾದ ಗುಣ. ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು
ಬಾರದಂತೆ ತಡೆ ಮಾಡುವುದು.

ಕೋಟ್ಯಾನುಕೋಟಿ ವೈದ್ಯರಿಂದ ಪರೀಕ್ಷೆಗೆ ಉಪಯೋಗಿಸಲ್ಪಡುತ್ತಿವೆ.

ಆಯುರ್ವೇದಾಶ್ರಮಂ, ಮದರಾಸು.

ಸೋಲ್ ಏಜಂಟ್ಸ್:—

ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ,

೯೨, ಜಕ್ಕಸೇಟಿ, ಬೆಂಗಳೂರು ಸಿಟಿ.

ಲೋಕಲ್ ಏಜೆಂಟ:—

ಹರಿಹರ ಪ್ರೆಸ್ ಮತ್ತು ಬುಕ್ ಡಿಪೋ, ಬ್ರಾಂಚ್, ಮಡಿಕೇರಿ.

50

ಎಂಪೈರ್ ಆಫ್ ಇಂಡಿಯ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಮೇಲ್ಕಂಡ ಕಂಪೆನಿಯ ಶೇರ್ ಹೋಲ್ಡರುಗಳ 38ನೇ ವಾರ್ಷಿಕ ಜನರಲ್ ಮೀಟಿಂಗು ಕಳೆದ ಏಪ್ರಿಲ್ ತಾ. 24ರಲ್ಲಿ ನಡೆಯಿತು. ಮಿ. ರುಸ್ತಂ ಕೆ. ಆರ್, ಕಾಮೂರನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಕಂಪೆನಿಯು ವಾರ್ಷಿಕ ವರದಿಯು ಪರಿಶೀಲನೆಯಿಂದ ಇದು ವರ್ಷ ವರ್ಷಕ್ಕೂ ಅಭಿವೃದ್ಧಿಯನ್ನೆದುತ್ತಾ ಬಂದಿದೆಯೆಂದೂ, ಇದರ ಆರ್ಥಿಕ ಸ್ಥಿತಿಯು ಉತ್ತಮವಾಗಿಯೂ, ಭದ್ರವಾಗಿಯೂ ಇದೆಯೆಂದೂ ತಿಳಿಯುತ್ತದೆ. ಫೆಬ್ರವರಿ ತಾ. 28ಕ್ಕೆ ಮುಗಿದ ಒಂದು ವರ್ಷದಲ್ಲಿ 8,511 ಹೊಸ ಪಾಲಿಸಿಗಳು ಕೊಡಲಾಗಿದೆ, ಅಂದರೆ ಇದು ಹಿಂದಿನ ಸಾಲಿಗಿಂತಲೂ 909 ಪಾಲಿಸಿಗಳು ಜಾಸ್ತಿಯಾಗಿ 9,33,000 ರೂ. ಗೆ ಹೆಚ್ಚಾಗಿ ಏನೆ ಮಾಡಲಾಗಿದೆ. ಈ ಕಂಪೆನಿಯಲ್ಲಿ ಕಳೆದ ಸಾಲಿನಲ್ಲಿ ಜನರು ಇನ್‌ಷ್ಯೂರೆನ್ಸ್ ಮಾಡಿದ ಮೊಬಲಗುಗಳು ಅನೇಕ ಸಂದರ್ಭದಲ್ಲಿ ಎಷ್ಟೇನೂ ಭಾರಿಯಾಗಿಲ್ಲದಿರುವುದರಿಂದ ಏನೆ ಮಾಡಿರುವ ಮೊಬಲಗಿನ ಸರಾಸರಿ ಕಳೆದ ಸಾಲಿಗಿಂತಲೂ ಸ್ವಲ್ಪ ಕಡಮೆಯಾಗಿರುತ್ತದೆ. ಕಳೆದ ಸಾಲಿನಲ್ಲಿ ಪಾಲಿಸಿದಾರರುಗಳ ಮರಣದಿಂದ ಸುಮಾರು 12 ಲಕ್ಷ ರೂ. ಅವರ ನಾಮಿನಿಗಳಿಗೆ ಹಂಚಲಾಗಿದೆ. ಇದು ಹಿಂದಿನ ಸಾಲಿಗಿಂತಲೂ ಸ್ವಲ್ಪ ಹೆಚ್ಚಾಗಿದೆಯೆಂದೇ ಹೇಳಬೇಕು. ಪಾಲಿಸಿಗಳ ಅವಧಿ ಪೂರೈಸಿ ಹಣ ಪಡೆದವರ ಸಂಖ್ಯೆ ಕಳೆದ ಸಾಲಿಗಿಂತಲೂ ಈ ಸಾಲಿನಲ್ಲಿ ಬಹಳ ಕಡಮೆಯಾಗಿದೆ. ಕಳೆದ ಸಾಲಿನಲ್ಲಿ 26,84,000 ರೂ. ಗಳು ಅವಧಿ ಪೂರೈಸಿದ ನಂತರ ಪಾಲಿಸಿದಾರರಿಗೆ ಕೊಡಲಾಯಿತು. ಹಿಂದಿನ ಸಾಲಿನಲ್ಲಿ 1,43,000 ರೂ. ಮೊತ್ತ ವಾಪಸು ಕೊಡಲಾಗಿದೆ. ಪ್ರೀಮಿಯಂ ಆದಾಯವು ಕಳೆದ ಸಾಲಿಗಿಂತಲೂ 1,94,000 ರೂ. ಹೆಚ್ಚಾಗಿರುವುದನ್ನು ನೋಡಿದರೆ ಕಂಪೆನಿಯು ಹೇಗೆ ಅಭಿವೃದ್ಧಿಯಾಗುತ್ತಿದೆಯೆಂಬುದು ಎಲ್ಲರಿಗೂ ವೇದ್ಯವಾಗುತ್ತದೆ. ಈ ಕಂಪೆನಿಯ ರಿಜರ್ವ್ ಫಂಡು ಕಳೆದ ಸಾಲಿನಲ್ಲಿ 4,29,15,000 ರೂ. ಗೆ ವೃದ್ಧಿಯಾಯಿತು. ಇದರ ಆಸ್ತಿಯು 4½ ಕೋಟಿ ರೂ. ಅನೇಕ ಪಾಲಿಸಿ ಹೋಲ್ಡರುಗಳು ಇನ್ನೂ ಹೆಚ್ಚು ಹೆಚ್ಚಾಗಿ ಪಾಲಿಸಿಗಳನ್ನು ತೆಗೆದುಕೊಂಡಿರುತ್ತಾರೆ ಈ ಕಂಪೆನಿಯ ಆಸ್ತಿಪಾಸ್ತಿಯನ್ನೂ, ಸ್ಥಿತಿಗತಿಯನ್ನೂ, ಆದು ಮಿತವ್ಯಯದಿಂದ ಕೆಲಸ ಮಾಡಿ ಹೆಚ್ಚು ಲಾಭ ಸಂಪಾದಿಸುತ್ತಿರುವುದನ್ನೂ ನೋಡಿದಲ್ಲಿ "ಎಂಪೈರ್ ಆಫ್ ಇಂಡಿಯ" ಅಷ್ಯೂರೆನ್ಸ್ ಕಂಪೆನಿಯಲ್ಲಿ ಏನೆ ಮಾಡುವುದೇ ಮೇಲೆಂದು ಎಲ್ಲರಿಗೂ ಮನನವಾಗುವುದೆಂದು ಈ ವಾರ್ಷಿಕ ರಿಪೋರ್ಟು ಹೇಳುತ್ತದೆ.

ಸಾಧ್ಯವಾದಾರ.

[ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ದೇಶದ ಪರಿಸ್ಥಿತಿಯು ಇಷ್ಟು ಕಠಿಣಾವಸ್ಥೆಯನ್ನು ಹೊಂದಲು ಕಾರಣವೇನು?

ಆರ್ಯ,

ನಮ್ಮ ದೇಶದ ಮತ್ತು ಜನರ ಸ್ಥಿತಿಗತಿಗಳು ದಿನೇ ದಿನೇ ಕೆಡುತ್ತಾ ಬರುತ್ತಲಿರುವದಕ್ಕೆ ಕಾರಣವೇನೆಂಬದನ್ನು ಅರಿತು ಸರಿಪಡಿಸಿಕೊಳ್ಳಲು ಮಾಡಬೇಕಾದ ಕರ್ತವ್ಯಗಳ ಕಾಲವು ತಲೆದೋರಿ 20 ವರ್ಷದ ಮೇಲ್ಪಟ್ಟಾದರೂ 'ಬರುತ್ತಾ ಬರುತ್ತಾ ರಾಯನ ಕುದುರೆ ಕತ್ತೆ ಆಯಿತೆಂಬಂತೆ ಜಾಗೃತಿಯನ್ನು ಹೊಂದುವದರ ಬದಲು ವಿದ್ಯಾವಂತರು ಮತ್ತು ಐಶ್ವರ್ಯವಂತರು ಸ್ವಾರ್ಥಪರರೂ ಹೇಡಿಗಳೂ ಆದದ್ದರಿಂದ ನಿದ್ರಾವಸ್ಥೆಯನ್ನು ಹೊಂದಿ ನೀರು ಬರುವ ಕಂಣಾನಲ್ಲೂ ರಕ್ತಬರುವಷ್ಟು ಕಡುತಂದ ಬಡತನದಲ್ಲೂ ಮತ್ತು ರೋಗಾದಿಗಳಲ್ಲೂ ಇಂದು ನಲುಗುವವರಾಗಿದ್ದೇವೆ

ಹೀಗಾಗಲು ಮುಖ್ಯ ಕಾರಣಗಳೇನೆಂಬದನ್ನು ಕುಗತು ಹೊರಗಿನಿಂದ ಬಂದ ಅನೇಕ ಮುಂದಾಳುಗಳೂ, ಮಹಾತ್ಮರೂ ಮತ್ತು ಪತ್ರಿಕೆಗಳೂ ಸಾರುತ್ತಲಿದ್ದರೂ ಕೆಡುವ ಕಾಲಕ್ಕೆ ಬುದ್ಧಿಯಿಲ್ಲ, ಮರಣಕಾಲಕ್ಕೆ ಮದ್ದಿಲ್ಲ ಎಂಬ ಗಾದೆಯಂತೆ ನಮ್ಮ ವಿದ್ಯಾವಂತರು, ಪತಿಯರು ಮತ್ತು ಐಶ್ವರ್ಯವಂತರು ಇವುಗಳ ಕಡೆ ಗಮನವಿಡದೆ ತಾವು ಸಹ ಇಂಗ್ಲೆಂಡಿನಲ್ಲಿ ಹುಟ್ಟಿ ಬೆಳೆದವರಹಾಗೆ ಅವರನ್ನು ಎಲ್ಲೂರುವಂತೆ ಊಡಿಗೆ ತೊಡಿಗೆ ನಡೆನುಡಿಗಳನ್ನು ಕಲಿಯಲುದ್ಯುಕ್ತರಾಗಿ ತಮ್ಮನ್ನು ತಾವೇ ಮರೆತು ಅವರು ಮೇಲು ತಾವು ಕೀಳು ಎಂಬ ಭಾವನೆಯಿಂದ ಕೂಣಾಯಲು ತೊಡಗಿರುವ ಅಲಂಕಾರದ ಪೋಷಾಕಿನ ಹಿಂಟು ಜಾತ್ಯವು ಸ್ವಲಿನ ದೇಶವನ್ನೇ ಅವರಿಸಿಕೊಂಡಿರುವದರಿಂದ ಇಂದು ಈ ಬಡತನದ ಕಷ್ಟಕ್ಕೆ ಈಡಾಗಿದ್ದೇವೆ ಎಂದರೆ ತಪ್ಪಾಗಲಾರದು.

ಗುಲಾಮಗಿರಿಯಲ್ಲು ಇರುವ ನಮಗೆ ಇಂಥಾ ಟೊಳ್ಳು ಸ್ವಭಾವದ ಆಡಂಬರದ ಪೋಷಾಕಿನಿಂದ ಎಷ್ಟೇ ಮಯೂರಗಳು ದೊರೆಯುವಂತಿದ್ದರೂ ಒಂದಲ್ಲ ಒಂದು ತರದಲ್ಲಿ ಹಾಸಿಯೇ ಹೊರ್ತು ಬೇರೆಯಲ್ಲ.

ಸ್ವದೇಶಕ್ಕೂ ಸ್ವಾಭಿಮಾನಿಗಳೂ ಆದ ದೇಶವಿದೇಶಿರು ನಮ್ಮ ಈ ತೆನಾದ ಕುಣಾಟವನ್ನು ನೋಡಿ ನಗಾಡುವಂಥ ಜ್ಞಾನವೂ, ಸಂಪಾದನೆ ಎಲ್ಲಾ ಸೂರೆಯಾಗಿ ಹೋಗುತ್ತಲಿದೆ ಎಂಬ ಯೋಚನೆಯೂ ಸಹ ನಮಗಿಲ್ಲದ ಮೇಲೆ ಸಂಪಾದನೆಯೆನ್ನೆಲ್ಲ ವ್ಯರ್ಥವಾಗಿ ಕಳೆಯುವ ಪೋಷಾಕುಗಳಿಗೆ ಪ್ರೋತ್ಸಾಹವನ್ನುಂಟುಮಾಡುತ್ತಲಿರುವೆವು.

ತಿಳಿಗೇಡಿಗಳಾದ ನಾವು ಹಿಂದುಗುಂದಿ ಯೋಚಿಸದೆ ದೀಪದ ಬೆಳಕಿಗೆ ಭ್ರಮೆಗೊರಡು ಪತಂಗವು ಪ್ರಾಣವನ್ನು ಕಳೆದುಕೊಳ್ಳುವಂತೆ ಪರಕೀಯರ ಅಂದಚಂದಕ್ಕೂ, ನಡೆನುಡಿಗೂ, ಊಡಿಗೆತೊಡಿಗೆಗೂ, ತೀರ್ಥಕ್ಷೇತ್ರ ಗಳಿಗೂ ಮತ್ತು ಹಬ್ಬಹರಿದಿನಗಳಿಗೂ ಮೋಹಿತರಾಗಿ ಸಂಪಾದನೆಯನ್ನೆಲ್ಲ ಕಳೆದುಕೊಂಡು ಬಡವರೂ ಸೋಮಾರಿಗಳೂ ಆಗಿ ಪ್ರಾಣವನ್ನು ಬಿಡುವ ಕಾಲವು ಸಮೀಪಿಸುತ್ತಲಿರುವಂತೆ ಕಾಲಾವಸ್ಥೆಯು ದಿನೇ ದಿನೇ ಭಯಂಕರವಾಗಿ ಪರಿಣಮಿಸುತ್ತಲಿರುವದನ್ನು ನೋಡುತ್ತಾ, ಕೇಳುತ್ತಾ, ನನಗೇನು ತನಗೇನು ಎನ್ನುತ ಸುಮ್ಮನೆ ಕೂರುವಷ್ಟು ಕಾಲ ದೇಶದಲ್ಲಿ ಬಡತನವು ಪ್ರಬಲಿಸಿ ಅಲ್ಪ ಸ್ವಲ್ಪ ಉಳಿಯಬಹುದಾದ ವಿದ್ಯಾವಂತರನ್ನೂ, ಐಶ್ವರ್ಯವಂತರನ್ನೂ ಈ ಬಡತನದ ದಾರಿದ್ರ್ಯವು ಕಾಲಕ್ರಮೇಣ ಅನಂತವಾದ ಕಷ್ಟ ನಷ್ಟಗಳಿಗೆ ಈಡು ಮಾಡದಿರಲಾರದೆಂಬದು ಖಂಡಿತವಾಗುವದರಿಂದ ಇನ್ನಾದರೂ ತಡಮಾಡದೆ ತಮ್ಮ ಆಡಂಭರದ ಪೋಷಾಕುಗಳನ್ನೆಲ್ಲ ತ್ಯಜಿಸಿ ಇದಕ್ಕಾಗಿ ವೆಚ್ಚಮಾಡುವ ಹಣವನ್ನೆಲ್ಲ ಸಂಗ್ರಹಿಸಿ ಗ್ರಾಮಾಂತರಗಳಲ್ಲಿ ಬಡತನದಿಂದಲೂ, ರೋಗಾದಿಗಳಿಂದಲೂ ಸಹಾಯ ಶೂನ್ಯರಾಗಿ ನರಳುತ್ತಿರುವ ಗ್ರಾಮವಾಸಿಗಳನ್ನು ಉದ್ಧಾರಮಾಡಲು ಗಮನವಿಡುವಂತೆ ಭಗವಂತನು ಮನವನ್ನು ಕೊಟ್ಟು ದೇಶವನ್ನು ಉದ್ಧಾರಮಾಡುವಂತೆ ಮಾಡಲೆಂದು ಪ್ರಾರ್ಥಿಸುತ್ತೇನೆ.

"ದೂರದೃಷ್ಟಿ."

ಕೊಡಗಿನ ವ್ಯವಸಾಯಗಾರರು.

ಆರ್ಯ,

ಮೇಲ್ಕಂಡ ಶಿರೋನಾಮದ ಲೇಖನವನ್ನು ನೋಡಿದೆನು ಈ ಲೇಖನದಲ್ಲಿ ರೈತರು ಸೋಮಾರಿಗಳೇ ಎಂಬ ಒಂದು ಅಂಶವು ಸೇರಿರುತ್ತೆ. ಆದರೆ ರೈತರು ಸೋಮಾರಿಗಳು ಎಂಬ ಅಪವಾದವು ಎಲ್ಲರಿಗೂ ಸಲ್ಲದು. ಪ್ರತ್ಯೇಕ ಕೊಡಗು ದೇಶದ ರೈತರನ್ನು ಮಾತ್ರ ತೆಗೆದುಕೊಂಡು ಎನರಿಬದರೆ ಎಂದೂ ಆಗಲಾರದು. ಇದು ಕೂಪಕೂರ್ಮ ನ್ಯಾಯದಂತಾಗುತ್ತೆ. ಆದಕಾರಣ ಪಕ್ಕದ ದೇಶವಾದ ಮಲಬಾರು, ದಕ್ಷಿಣ ಕನ್ನಡ, ಮೈಸೂರು, ಈ ದೇಶದ ರೈತರುಗಳನ್ನು ತೆಗೆದು ಕೊಳ್ಳೋಣ. ಭೂದೇವಿಯ ಪುತ್ರರೆಂದರೆ ಇವರು ನಿಸಿಲೆನ್ನದೆ, ಮಳೆ ಎನ್ನದೆ, ಪ್ರಾತಃಕಾಲವೇ ಕೆಲಸಕ್ಕೆ ಹೊರಡುವರು. ಮಳೆ ಹೆಚ್ಚಾಯಿತೆಂದರೆ ಗದ್ದೆ ವ್ಯವಸಾಯ ಮಾಡುವರು. ಮಳೆ ಕಡಿಮೆಯಾಯಿತೆಂದರೆ ಕುಸ್ತಿ ವ್ಯವಸಾಯವನ್ನು ಮಾಡುವರು. ಇದರ ಮಧ್ಯೆ ಇತರ ವ್ಯವಸ್ಥೆಯು ಬೇರೆ. ನೀರು ಕಡಿಮೆ ಎಂದರೆ ಬಾವಿಗಳನ್ನು ತೋಡಿಸಿ ನೀರೆತ್ತಿ, ಮೆಣಸಿನಕಾಯಿ, ಜೋಳ, ಉರುಳೇಗೆಡ್ಡೆ, ಗೆಣಸು, ಕಬ್ಬು, ನೀರುಳ್ಳಿ ವಗೈರೆಗಳನ್ನು ಹೇರಳವಾಗಿ ಬೆಳೆಯುವರು. ಮಳೆ ಬೀಳಲಿ ವ್ಯವಸಾಯ ಮಾಡುವ ಎಂದೆನ್ನುವುದಿಲ್ಲ. ಮಳೆ ಇಲ್ಲದಿದ್ದರೂ ಸೊಂಟಕಟ್ಟಿ ನೀರನ್ನು ಎತಗಳಿಂದಲೋ, ಕಪಿಲೆಗಳಿಂದಲೋ ಹಾಯಿಸಿ ವ್ಯವಸಾಯ ಮಾಡಿ ರೈತರೆಂಬ ನಾಮಧೇಯವನ್ನು ಸಾರ್ಥಕಗೊಳಿಸುವರು.

ಜಾನುವಾರುಗಳನ್ನು ಕಾಪಾಡುವುದರಲ್ಲಿ ಶಹಭಾಸುಗಿರಿಯನ್ನು ಪಡೆದಿದ್ದಾರೆ.

ಇವರ ಮನೆಯ ಆಡಳಿತವು ಒಂದು ರಾಜ್ಯಕ್ಕೆ ಸಮಾನ. ಮನೆಗೆ ಗೃಹಸ್ಥ, ಗೃಹಿಣಿಯರೇ ಅಧಿಪತಿಗಳು. ಉಳಿದವರೆಲ್ಲರೂ ಇವರ ಅಧೀನರು. ಗೃಹಸ್ಥನು ಹೊರಗಿನ ಕಾರುಬಾರುಗಳನ್ನು ಎಲ್ಲಾ ನಡೆಸಲು ಶಕ್ತನು. ಗೃಹಿಣಿಯು ಮನೆಯ ಒಳಗಿನ ಕಾರುಬಾರುಗಳನ್ನು ಏಕ ರೀತಿಯಿಂದ ಸಮಂಜಸವಾಗಿ ನಡಿಸುವಳು. ಗೃಹಸ್ಥ, ಗೃಹಿಣಿಯರ ಅಪ್ಪಣೆಗೆ ಮಿಕ್ಕ ಉಳಿದವರೆಲ್ಲರೂ ಒಳಪಟ್ಟಿರುವರು. ಕಷ್ಟದ ಬಿವರಿನಿಂದ ಮೈಯ್ಯನ್ನು ನೋಯಿಸುವರು. ಇವರು ಪಾಲ್ಗು ಪಂಕ್ತಿಯ ವಿಷಯು ಹೋರಾಡರು. ಯಜಮಾನ, ಯಜಮಾನಿಯರ ಅಪ್ಪಣೆಯೇ ವೇದವಾಕ್ಯ. ಲಕ್ಷ್ಮಿಯ ನೆಲೆವೀಡು ಇದು.

ಕೊಡಗು ವ್ಯವಸಾಯಗಾರರನ್ನು ತೆಗೆದುಕೊಳ್ಳೋಣ ಮೈನಾರಿಟಿ ಕಳೆದು ಮೆಜಾರಿಟಿ ಬಂತೆಂದರೆ ಅಲ್ಲಿ ಪಾಲಾಗಬೇಕು. ತೋಟ, ಗದ್ದೆ ವ್ಯವಸಾಯವೇ ಪ್ರಮುಖವಾದದ್ದು. ಇವರಿಗೆ ಗದ್ದೆ ವ್ಯವಸಾಯ ನಾಲ್ಕು ತಿಂಗಳು; ಇದನ್ನು ಕಟಾವು ಮಾಡುವುದಕ್ಕೆ ಒಂದು ತಿಂಗಳು ಒಟ್ಟು 5 ತಿಂಗಳೂ ಗದ್ದೆ ವ್ಯವಸಾಯಕ್ಕೆ ಕಳೆಯಿತು ಮಿಕ್ಕ ಏಳು ತಿಂಗಳನ್ನು ಹ್ಯಾಗೆ ಕಳೆಯುವರು ಎಂಬುದೊಂದು ಸಮಸ್ಯೆ. ಕಾಫಿ ತೋಟ ವಗೈರೆ ಮಾಡಲು ಲಾಯಕ್ಕಾದ ಕಾಡು ಪ್ರತಿಯೊಬ್ಬರಿಗೂ ಇದೆ ಬೆಳಗಾಯಿತೆಂದರೆ ಶಿವಧ್ಯಾನವಿಟ್ಟರೂ ಕಾಫಿಪಾನ ಬಿಡಲಾಗುವುದಿಲ್ಲ ಪ್ರತಿ ಘಳಿಗೆಗೂ ಬೇಕಾಗುವ ಈ ಪಾನಕ್ಕೆ ಕಾಫಿ ಬೀಜವನ್ನು ಅನೇಕರು ಅಂಗಡಿಗಳಿಂದ ಕೊಳ್ಳುವುದನ್ನು ನಾನು ನೋಡಿದ್ದೇನೆ. ಕೊಡಗಿನಿಂದ ಹೇರಳವಾಗಿ ರಫ್ತು ಆಗುವ ಪದಾರ್ಥವು ಭತ್ತ. ಕಾಫಿಯು ಕೆಲವರಿಗಿದೆ, ಇನ್ನು ಅನೇಕರಿಗಿಲ್ಲ. ಆದರೆ ತಮ್ಮ ಅತ್ಯಾವಶ್ಯಕವಾದ ಉಳಿದ ಏಳು ತಿಂಗಳು ಕಾಲವನ್ನು ಹ್ಯಾಗೆ ಕಳೆಯುವರು ಎಂಬುದನ್ನು ತಿಳಿಯಬೇಕಾದದ್ದೇ.

ಕಿತ್ತಳೆ ತೋಟಗಳಿಗೆಲ್ಲಾ ಕಾಯಿಲೆ ಬಂದು ಹೋಯಿತೆನ್ನುತ್ತಾರೆ. ಈ ಕಾಯಿಲೆಗಳು ಮನುಷ್ಯ ಉತ್ಪತ್ತಿಯೆಲ್ಲ, ದೈವ ಉತ್ಪತ್ತಿ. ಇದಕ್ಕೊಂದು ಉದಾಹರಣೆ. ಎಂದೂ ಸೊಂಪಾಗಿ ಬೆಳೆಯುತ್ತ ಲಕ್ಷಾಂತರ ರೂಪಾಯಿಗಳ ಉರುಳುಗೆಡ್ಡೆ ಫಸಲನ್ನು ರೈತರು ಬಾವಿಗಳಿಂದ ನೀರನ್ನು ಹಾಯಿಸಿ ಮೈಸೂರು ಸೀಮೆಯ ಅನೇಕ ಕಡೆಗಳಲ್ಲಿ ಬೆಳೆಯಿಸಿ ಸಂಪಾದಿಸುತ್ತಿದ್ದರು. ಈ ವರ್ಷವೂ ಅದೇ ರೀತಿ ವ್ಯವಸಾಯ ಮಾಡಿದರು. ಬಂತು ಒಂದು ತರಹ ಜಾಡ್ಯ ಗಿಡದ ಬೆಳವಣಿಗೆ ಸೋತು, ಎಲೆಗೆಳ್ಳು ಕೆಂಪಾಗತೊಡಗಿದ್ದವು. ಮೂತಭಾರಿಗಳಾದ ರೈತರು ಸೊಂಟ ಕಟ್ಟಿ ಹೊರಟರು. ತಜ್ಞ ಅಧಿಕಾರಿಗಳನ್ನು ನೋಡಿದರು. ಔಷಧಿಗಳನ್ನು ತಂದು ಸ್ಪ್ರೇಮೂಲಕ ಗಿಡಗಳಿಗೆ ಎರಚಿದರು. ಕ್ರಿಮಿಕೀಟ ಪರೀಕ್ಷಾನಿಪುಣರಾದ ಎಂಟಮಲಜಿಸ್ಟ್‌ರವರನ್ನು ಕರೆತಂದರು, ಸಫಲವಾಗಲಿಲ್ಲ. ಗಿಡಗಳೆಲ್ಲಾ ಒಣಗಿ ಹೋದವು. ಪ್ರಯತ್ನವೆಲ್ಲಾ ನಿರಾಶೆ ಆಯಿತು. ಬುದ್ಧಿವಂತರಾದ ಕೆಲವು ರೈತರು ಅದನ್ನು ಕಿತ್ತು ಹಾಕಿ ರಾಗಿ ಜೋಳ ವಗೈರೆ ಅದೇ ಜಮೀನಿಗೆ ಹಾಕಿ ವ್ಯವಸಾಯ ಮಾಡಿದರು ಸೊಂಪಾಗಿ ಮುದ್ದುಮುದ್ದಾಗಿ ಬೆಳೆದಿದೆ. ರೈತನ ಮತ್ತು ಜಾನುವಾರುಗಳ ಜೀವನಕ್ಕೆ ಆಗುವಷ್ಟು ಬೆಳೆದಿದೆ. ಹುಮ್ಮಸ್ಸು ಕುಳಿತಿದ್ದರೆ ಆಗುತ್ತಿತ್ತೇ? ಉರುಳುಗೆಡ್ಡೆ ವ್ಯವಸಾಯದಿಂದ ನಿರಾಶೆತರಾದ ರೈತರಿಗೆ, ರಾಗಿ, ಜೋಳ ಬೆಳೆಯಲು ಯಾರೂ ಹೇಳಿಕೊಡಲಿಲ್ಲ. ಒಂದು ಸಫಲವಾಗದಿದ್ದರೆ ಇನ್ನೊಂದನ್ನು ಪ್ರಯತ್ನಿಸಬೇಕು. ಮಳೆ ಯತ್ನವ ಮಾಡು, ಮುಳೆ ಯತ್ನವ ಮಾಡು ಸೆಫಲವಾಗದದು. ಕೈಗೂಡುವುದು ಎಂಬದನ್ನು ಎಂಡನೇ ತರಗತಿಯಲ್ಲ ಹೇಳಿ ಕೇಳಿದವರಲ್ಲ, ಅದರಂತೆ ಮಾಡಿದರೆ ಆಯಿತು.

ಬಿ. ಯಂ. ಆಸ್ಪಯ್ಯ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ.

ಈ ವಿದ್ಯಾಪೀಠದ ಮುಂದಿನ ವರ್ಷದ ಕಾರ್ಯಕ್ರಮವು ಬರುವ 15ನೇ ಜೂಲಾಯಿಗೆ ಪ್ರಾರಂಭವಾಗುವದು. ಅದರ ಎಲ್ಲಾ ಶಾಖೆಗಳಲ್ಲಿಯ ಶಿಕ್ಷಣವೂ ಆ ದಿನವೇ ಮೊದಲಾಗುವದು. ಇಲ್ಲಿ ಶಿಕ್ಷಣವನ್ನು ಪಡೆಯಲಿಚ್ಛಿಸುವವರು ಪ್ರವೇಶಕ್ಕಾಗಿ ಇಲ್ಲಿಂದ "ಫಾರ್ಮ್"ಗಳನ್ನು ತರಿಸಿಕೊಂಡು, ಅವನ್ನು ಸಕ್ರಮವಾಗಿ ತುಂಬಿಸಿ, ಇದೇ ತಿಂಗಳು 20ರೊಳಗೆ ಇಲ್ಲಿಗೆ ಮುಟ್ಟುವಂತೆ ಕಳುಹಿಸಬೇಕು.

ಬಡ ವಿದ್ಯಾರ್ಥಿಗಳಿಗಾಗಿ ಧರ್ಮಾರ್ಥ ಶಿಕ್ಷಣದ ವ್ಯವಸ್ಥೆಯೂ ಇದೆ. ಆ 'ಫ್ರೀಷಿಸ್' (Freeship)ಗಳ ವಿವರ ಹೀಗಿದೆ.

ಭಿಷಗಿಂದು—ಇದರ ಶಿಕ್ಷಣಕ್ಕೆ 6 ವಿದ್ಯಾರ್ಥಿಗಳನ್ನು ಧರ್ಮಾರ್ಥ ಸೇರಿಸಿಕೊಳ್ಳಲಾಗುವದು. ಮೆಟ್ರಿಕ್. ಎಸ್. ಎಸ್. ಎಲ್. ಸಿ., ಸೀನಿಯರ್ ಕೇಂಬ್ರಿಜ್ ಪಾಸಾದವರು ಅರ್ಜಿ ಹಾಕಬಹುದು.

ಆಯುರ್ವೇದ ಶಿರೋಮಣಿ—ಇದಕ್ಕೆ 6 ವಿದ್ಯಾರ್ಥಿಗಳನ್ನು ಧರ್ಮಾರ್ಥ ಸೇರಿಸಿಕೊಳ್ಳಲಾಗುವದು. ಕನಿಷ್ಠ ಪಕ್ಷಕ್ಕೆ ಮ್ಯಾಟ್ರಿಕ್, ಅಪ್ಪರ್ ಸೆಕೆಂಡರ್ ಪರೀಕ್ಷೆ ಪಾಸಾಗಿರಬೇಕು.

ಚಿಕಿತ್ಸಿನ್—ಇದಕ್ಕೆ 9 ವಿದ್ಯಾರ್ಥಿಗಳನ್ನು ಧರ್ಮಾರ್ಥ ಸೇರಿಸಿಕೊಳ್ಳಲಾಗುವದು. ಕನ್ನಡ ಭಾಷಾಜ್ಞಾನ ಚೆನ್ನಾಗಿ ಉಳ್ಳವರು ಬೇಕು.

ಲಿಪಿಲೇಖ ಶಿರೋಮಣಿ—ಇದರ ಶಿಕ್ಷಣಕ್ಕೆ 4 ವಿದ್ಯಾರ್ಥಿಗಳನ್ನು 'ಫ್ರೀ' ಸೇರಿಸಿಕೊಳ್ಳಲಾಗುವದು. ಇದಕ್ಕೆ ಮೆಟ್ರಿಕ್, ಎಸ್. ಎಸ್. ಎಲ್. ಸಿ., ಸೀನಿಯರ್ ಕೇಂಬ್ರಿಜ್ ಪಾಸಾದವರು ಅರ್ಜಿ ಹಾಕಬಹುದು.

ಹೆಚ್ಚಿನ ಮಾಹಿತಿಗಳಿಗೆ 'ಸ್ವಾಮಿ' ಇಟ್ಟು ಬರೆಯಿರಿ.

ವಿ. ಸೂ.—ವಿದ್ಯಾರ್ಥಿಗಳ ವಯಸ್ಸು 18ಕ್ಕೆ ಕಡಮೆಯಿರಕೂಡದು. ಧರ್ಮಾರ್ಥ ಶಿಕ್ಷಣವನ್ನಿಚ್ಛಿಸುವ ಬಡವರು ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಬೇಕು.—

ರೆಜಿಸ್ಟ್ರಾರ್, ಪ್ರೇಮ ವಿದ್ಯಾಪೀಠ,
ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಪ್ರಕಟಣೆ.

ಪರಸಿನಕಡವು ಮದಪ್ಪುರ ದೇವಸ್ಥಾನದಿಂದ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪರಸಿನಕಡವು-ಮದಪ್ಪುರ ದೇವಸ್ಥಾನದ ಪರವಾಗಿ ಭಕ್ತ ಮಹಾಜನಗಳಿಂದ ಹರಕೆ ಮತ್ತು ಕಾಣಿಕೆ ಮೊದಲಾದವುಗಳನ್ನು ಸ್ವೀಕರಿಸುತ್ತಿರುವರೆಂದು ತಿಳಿಯುಬಂದಿದೆ. ಆದ್ದರಿಂದ ಮಲೆಯೊಳಲ್ಲಿರುವ ಪರಸಿನಕಡವು ಮದಪ್ಪುರ ದೇವಸ್ಥಾನದ ಯಾವ ಕಾಣಿಕೆ ಯೂ ಹರಕೆಗಳನ್ನು ಈ ದೇವಸ್ಥಾನಗಳಲ್ಲಿ ಕೊಡಬಾರದಾಗಿ ಕೊಡಗಿನ ಭಕ್ತಾದಿಗಳಲ್ಲಿ ವಿನತಿ. ಪರಸಿನಕಡವು ದೇವಸ್ಥಾನದಿಂದ ಈ ಕಾಣಿಕೆಗಳನ್ನು ಸ್ವೀಕರಿಸಲು ಕೊಡಗಿನಲ್ಲಿ ಯಾರನ್ನೂ ನೇಮಿಸಿರುವದಿಲ್ಲ. ಆಡಳಿತ ಯುಕ್ತ ಮೇಲ್ಕಂಡ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಈ ಕೆಳಗಿನ ವಿಳಾಸದವರಿಗೇನೇ ಕಳುಹಿಸಿಬೇಕಲ್ಲದೆ ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡಬೇಕೆಂದು ಅತಿ ವಿನಯದಿಂದ ಕೋರುವ,

ಪಿ. ಯಂ. ಕಂಞಿರಾಮನ್,
ಪರಸಿನಕಡವು. ಮೇನೇಜರ್,
25—5—'35. ಪರಸಿನಕಡವು ಮದಪ್ಪುರ ದೇವಸ್ಥಾನ.
26—2

For Sale.

KODAGARAHALLI ESTATE.

Kodagarahalli Estate adjoining Coorghally Estates Ltd., near 11th mile Stone Mercara—Farzerpet road Sunticoppa.

For particulars apply to:—

K. Narsimha Murti.
Brahmin Valley,
Mercara.

ಮೂ ರಾ ಟಿ ಕ್ಕಿ ದೆ.

ಮಡಿಕೇರಿಯಿಂದ ಫ್ರೇಜರ್‌ಪೇಟೆಗೆ ಹೋಗುವ 11 ನೇ ಮೈಲು ಕಲ್ಲಿನ ಬಳಿ ಇರುವ ಕೂರ್ಗಳ್ಳಿ ಕಂಪೆನಿಯವರ ಕಾಫಿ ತೋಟಕ್ಕೆ ಮುಟ್ಟಿಕೊಂಡಿರುವ ಕೊಡಗಂಳ್ಳಿ ತೋಟವು ಮೂರಾಟಕ್ಕೆ ಸಿದ್ಧವಾಗಿದೆ. ಕೊಂಡುಕೊಳ್ಳಲು ಅಪೇಕ್ಷಿಸುವವರು ಹೆಚ್ಚಿನ ವಿಷಯಕ್ಕೆ ಬರೆದು ತಿಳಿದುಕೊಳ್ಳಬಹುದು.

ಕೆ. ನರಸಿಂಹ ಮೂರ್ತಿ,
ಬ್ರಾಹ್ಮಣ ಕೇರಿ,
8—7 ಮಡಿಕೇರಿ.

---

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪೆನಿ

ಜ್ವರದ ಗುಳಿಗೆಗಳು.

ಜಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52—39) ಮುಖ್ಯ ಕಂಪೆನಿ,
ಗಿರಗಾಂವ, ಮುಂಬಯಿ.

ಭಾರತದ ಮುಂದಿನ ಜನಾಂಗದ ಆರೋಗ್ಯ, ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಟರ್ಸ್—
ಕೆ. ಟಿ. ಡೋಂಗರೆ ಕಂಪೆನಿ,
(52—18) ಗಿರಿಗಾಂವ್, ಬೊಂಬಾಯಿ.



All kinds of World Famous Guns, Rifles, Revolvers, Pistols, Hunting and Fishing Requisites at Lowest Competitive prices.

ARMS & AMMUNITION.

HUNTING & FISHING REQUISITES.

CURRENT CATALOGUE FREE

The Bombay Armoury,

329-331, Abdul Rehman Street,

12—3 BOMBAY, 3.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—16 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	31,390— 0—0
ಜಮೂಬಂದ ಠೇವಣಾತಿ	—	21,0 196—13—7
ವಸೂಲಾದ ಕ್ಷೇಮನಿಧಿ	—	75,248— 12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಬಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ನರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ಸರ್ಕಾರ್‌ಕ್ಕೊಂದಾಪರ್ತಿ ಕೊ ಆಪರೇಟಿವ್ ರಿಪಬ್ಲಿಕ್ಯಾರವರ ತಿಕ್ಷ್ಣ ಅಜಮಾಯಿಸಿಕೆ ಮಾಡುತ್ತಾರೆ.

ಪೈಸಿಡೆಂಟರು, ಕೆ. ಎನ್. ಸುಬ್ರಾಯ. (ಆನ್ಸ್ಟ್ರೆರ್ಡ್ ರಿಜಿಸ್ಟ್ರಾರ್.)

ಹೈಜರ್ ರಾ. ಸಾ. ಪಾಂಡಂಡ ಜಂಗಪ್ಪನವರು,

ಸಕ್ರೆಟರಿ ಮನೆಯಪ್ಪಂಡ ಬೆಳ್ಯಪ್ಪನವರು.

ಕಾರೀಕು 1—7—1934.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಶೀಘ್ರವಾಗಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ:—ಮೆ. ವಿ. ಆರ್. ತಮ್ಮಯ್ಯನವರು.

ದಕ್ಷಿಣ ಕೊಡಗಿಗೆ:—ಮೆ. ಮೂದೇಟಿರ ಪೂವಯ್ಯನವರು.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ,—ಸಿದ್ದಾಪುರ—ಮೆ. ಐನಂಡ ಮೊದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರು,

ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜೆ. ಮೊದಮ್ಮೆಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಪೂಜ್ಯಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಪೆಂಟರ್‌ನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಸೂಚನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಬದ್ಧಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಪ್ತಿ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸೆಕ್ಯೂರ್ ಕೇಪರ್ ಖರಾರು ಫಾರಮುಗಳೂ ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜವೂ ಖರ್ಚಿನ ಜಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಬಿಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

THE EMPIRE OF INDIA LIFE ASSURANCE COMPANY, LIMITED.

Established 1897. Head Office.—BOMBAY.

SUMMARY OF RESULTS:—

(Present rates of Interim Bonus)

Rs. 16/— on Whole Life Policies
Rs. 14/— on Endowment Policies } Per Rs, 1000 Sum Assured.

Policies in force	Rs. 11,16,64,000.
Assets	Rs. 4 37 51,000.
Claims paid	Rs. 4,17,00,000.
Income	Rs. 73,37,000.

The PREMIUM RATES charged by this Company are REMARKABLY LOW and hence the above results are all the MORE CREDITABLE We therefore, recommend an "EMPIRE OF INDIA POLICY" to you and your friends.

WANTED INFLUENTIAL AGENTS IN ALL IMPORTANT PLACES.

For particulars please apply to :— Branch Secretary :—

52—32 152/3, COMMERCIAL STREET, Bangalore.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪಿಸಲ್ಪಡದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	ರೂ.	15,53,48,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟಿ	ಕರಾಚಿ	ಮೊಂಬಾಸೆ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕಾಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಡಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಿಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ
ಕೊಯಂಬತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು, 52—24

ಯಂ. ವಿ. ನಟರಾಜಕೃಷ್ಣ ನಾಯುಡು, (ಬ್ರಾಂಚ್ ಸೆಕ್ರೆಟರಿ.)

ಕಟ್ಟುಕಷಾಯ ಮಲೆ ಜ್ವರಕ್ಕೆ—ಇದು ಇಂಜಕ್ಷನ್ ಮತ್ತು ಕ್ವೀನು ಸೇವಿಸಿಯೂ ಗುಣವಾಗದಿರುವ ಮಲೆ ಜ್ವರ ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗೆಡ್ಡೆ ದೋಷದಿಂದ ಬರುವ ಜ್ವರಗಳಿಗೆ ಪಾತ್ರವಾಗಿ ಕೊಡುತ್ತದೆ. ಸೀಸೆ ಒಂದಕ್ಕೆ ರೂ. 1—3—0. 3ಕ್ಕೆ 4—0—0. 6ಕ್ಕೆ 7—8—0. 12ಕ್ಕೆ 14—0—0.

ಮಲೆ ಜ್ವರಕ್ಕೆ ಕಟ್ಟು ಕಷಾಯ

ಚಿಂತಾಮಣಿ—ಇದು ಪ್ರಮೇಹ ಮೂತ್ರ ಕೃಚ್ಛ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಚೀಂದಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಚ್ಛೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಜುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬಾಟ್ಲಿ 1ಕ್ಕೆ ರೂ 1—4—0, 3ಕ್ಕೆ 3—8—0, 6ಕ್ಕೆ 6—12—0.

ರೋಮನಾಶಿನಿ—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ಮುನೋಲ್ಲಾಸಿನಿ ತೈಲ—ತಲೆನೋವು, ತಲೆ ತಿರುಗುವುದು, ತಲೆತಿರಿ, ಕಂಡುರಿ, ಕಿವಿಯಿಂದ ಕೀವು ಸೋರುವುದು, ಕಿವುಡತನ, ಕಂಡು ನೋವು, ಅಪಸ್ಮಾರ, ನಿದ್ದೆಬಾರದಿರುವುದು, ನೆನಪು ಶಕ್ತಿ ಕುಂದಿಕೋಗುವುದು ಇವುಗಳನ್ನೆಲ್ಲಾ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ, ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ, ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಸೀಸೆ 1ಕ್ಕೆ ರೂ 1/3ಕ್ಕೆ 2—10—0, ಒಂದು ದೊಡ್ಡ ಸೀಸೆಗೆ 2—0—0 3ಕ್ಕೆ 5—8—0.

ಏಕಾಸ—ಮುನೋಲ್ಲಾಸಿನಿ ಕಂಪೆನಿ,

52—17 ಕಟಲಾಗು ತರಿಸಿ ನೋಡಿರಿ. 9 ಮಂಗಳೂರು.

Printed & pudlished by P. I. Belliappa at "Kodagu" Press, Mercara for 'Kodagu"-Ltd.